ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ, ಸೇವಾಭದ್ರತೆಯನ್ನು ಕೊಡಬೇಕು ಎನ್ನುವಂಥ ಮಾತು ಸಮಂಜಸವಾಗಿದ್ದರೂ ಕೂಡ ಅಭಿವೃದ್ಧಿ ರಾಷ್ಟ್ರಗಳಲ್ಲಿ ಸಂಪನ್ಮೂಲಗಳ ಇತಿಮಿತಿಗಳಲ್ಲಿಯೇ ನಾವು ಕೆಲಸ ಮಾಡಬೇಕಾಗುತ್ತದೆ. ಈಗ 5648 ಗ್ರಾಮಪಂಚಾಯಿತಿಗಳಲ್ಲಿ ಎಲ್ಲಾ ಕಡೆ ಗ್ರಂಥಾಲಯಗಳನ್ನು ಪ್ರಾರಂಭ ಮಾಡಿದರೆ ಮತ್ತು ಗ್ರಾಮಪಂಚಾಯಿತಿಗಳಲ್ಲಿ ಕೆಲಸ ಮಾಡತಕ್ಕಂಥ ಬಿಲ್ ಕಲೆಕ್ಟರುಗಳು ಇದ್ದಾರೆ, ವಾಟರ್ ಅಪರೇಟರ್ಸ್‌ಗಳು ಇದ್ದಾರೆ, ಗುಮಾಸ್ತರಾಗಿ ಕೆಲಸ ಮಾಡತಕ್ಕಂಥವರು ಇದ್ದಾರೆ, ಈಗ 73ನೇ ಸಂವಿಧಾನದ ತಿದ್ದುಪಡಿಯಿಂದ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಆಲ್ಲಿಯ ಸ್ವಾಯತ್ತ ಆಡಳಿತವನ್ನು ನಡೆಸತಕ್ಕಂಥ ಗ್ರಾಮಮಟ್ಟದ ಪ್ರಜಾಪ್ರಭುತ್ವಗಳು ಏನಿವೆ ಅವರ ಸಂಪೂರ್ಣವಾದಂಥ ಸಾರ್ವಭೌಮತ್ವವ ಛಿದ್ರಿ ಮಾಡುವುದಕ್ಕೆ ಮನಸ್ಸು ಮಾಡಿದಂತಾಗುತ್ತದೆ. ಈ ಎಲ್ಲಾ ಕಾನೂನಿನ ಮತ್ತು ಇತಿಮಿತಿಗಳ ವಿಚಾರಗಳನ್ನು ಯೋಚನೆ ಮಾಡಿ ಸಹಾನೂಭೂತಿ ಪರವಾಗಿ ಈ ಸರ್ಕಾರ ಪ್ರತಿಕ್ರಿಯೆಸುತ್ತದೆ ಎಂದು ಹೇಳುತ್ತೇನೆ.

ಬ್ಯಾಂಡಿಟ್‌ಕ್ವೀನ್ ಎನ್ನತಕ್ಕಂಥಹ ಚಲನ ಚಿತ್ರ ಕುರಿತು.

ಶ್ರೀ ಇ. ಮಾರುತ್ತಿ ರಾವ್ ಪವಾರ್ (ನರಸಿಂಹರಾಜ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಒಂದು ಚಲನಚಿತ್ರ ಪ್ರದರ್ಶಿತವಾಗುತ್ತಿದೆ. ಅಶ್ಲೀಲ ಭಾಷೆಗಳನ್ನು ಹೊಂದಿರತಕ್ಕಂಥ ಸಂಪೂರ್ಣ ನಗ್ನ ದೃಶ್ಯಗಳನ್ನು ಹೊಂದಿರತಕ್ಕಂಥ, ಅತ್ಯಂತ ಕೆಟ್ಟ ರೀತಿಯಲ್ಲಿ ಚಿತ್ರೀಕರಣವಾಗಿರತಕ್ಕಂಥ, 'ಬ್ಯಾಂಡಿಟ್‌ಕ್ವೀನ್' ಎನ್ನತಕ್ಕಂಥ ಚಲನಚಿತ್ರ ನಮ್ಮ ಕರ್ನಾಟಕದಲ್ಲಿ ಪ್ರದರ್ಶನವಾಗುತ್ತಿದೆ. ಆದರೆ ಇಲ್ಲಿಯತನಕ ಅಶ್ಲೀಲವಾದಂಥ ನಗ್ನವಾಗಿರತಕ್ಕಂಥ ಚಿತ್ರ ಪ್ರದರ್ಶನವಾಗುತ್ತಿದ್ದರೂ ಸರ್ಕಾರ ಇಲ್ಲಿಯತನಕ ಆ ಚಿತ್ರವನ್ನು ತಡೆಹಿಡಿಯುವಂಥ ಕೆಲಸವಾಗಲಿ, ಅಥವಾ ಅಂಥಹ ದೃಶ್ಯಗಳನ್ನು ತೆಗೆದುಹಾಕುವಂಥ ಕೆಲಸವಾಗಲಿ ಮಾಡದೇ ಇರುವುದನ್ನು ನೋಡಿದರೆ ತಮ್ಮೆಲ್ಲರದ್ದೂ ಆ ಚಿತ್ರಕ್ಕೆ ಸಹಮತಿ ಇದೆ ಏನೋ ಎನ್ನುವಂಥ ಸಂಶಯ ಬರುತ್ತದೆ.

ಉಪಾಧ್ಯಕ್ಷರು : ಮಾರುತಿರಾವ್‌ರವರೇ, ಈ ವಿಷಯ ಫಿಲಂ ಸೆನ್ಸಾರ್ ಮಂಡಳಿಗೆ ಬರುತ್ತದೆ.

ಶ್ರೀ ವಿ. ಮಾರುತಿರಾವ್ ಪವಾರ್ : ಇಂತಹ ಚಿತ್ರದಿಂದ ನಮ್ಮ ಭಾರತೀಯ ಸಂಸ್ಕೃತಿ ಯಾವ ಮಟ್ಟಕ್ಕೆ ಇಳಿಯುತ್ತಿದೆ ಎನ್ನುವುದನ್ನು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದನ್ನೆಲ್ಲಾ ನೋಡಿದರೆ, ನಮ್ಮ ಯುವ ಪೀಳಿಗೆಗೆ ಒಂದು ಕೆಟ್ಟ ಪರಿಣಾಮವಾಗಿ ಅವರು ಕೆಟ್ಟ ಹಾದಿ ತುಳಿಯುವುದಕ್ಕೆ ಆಸ್ಪದವಾಗುತ್ತದೆ. ಇಲ್ಲಿಯ ತನಕ ಎಷ್ಟೋ ಚಿತ್ರಗಳು ಬಿಡುಗಡೆಯಾಗಿವೆ. ಆದರೆ ಈ ರೀತಿಯ ಚಿತ್ರ ಇಲ್ಲಿಯವರೆಗೆ ಭಾರತದ ಯಾವ ಮೂಲೆಯಲ್ಲಿಯೂ ಬಿಡುಗಡೆಯಾಗಿಲ್ಲ. ಪತ್ರಿಕೆಗಳಲ್ಲೂ ಸಹ ಇದರ ಬಗ್ಗೆ ಈಗಾಗಲೇ ಪ್ರಕಟವಾಗಿದೆ. ದಯಮಾಡಿ ಆ ಚಿತ್ರವನ್ನು ತಮ್ಮ ಸರ್ಕಾರದ ಪತಿಯಿಂದ ರದ್ದುಪಡಿಸಬೇಕು ಎನ್ನುವಂಥ ಒತ್ತಾಯವನ್ನು ಮಾಡುತ್ತೇನೆ. ನಾವು ಹೆಣ್ಣುಮಕ್ಕಳಿಗೆ ತುಂಬಾ ಗೌರವ ಕೊಡುತ್ತೇವೆ ಅಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗೆ ಅವಮಾನಕರವಾದ ರೀತಿಯಲ್ಲಿ ಈ ರೀತಿಯಾದಂಥ ಚಲನಚಿತ್ರ ಪ್ರದರ್ಶನವಾಗುತ್ತಿರುವ ನಮ್ಮೆಗೆಲ್ಲರಿಗೂ ಸಹ

ಅವಮಾನವಾಗುತ್ತದೆ. ಆ ಸಂದರ್ಭದಲ್ಲಿ ತಾವು ಚಲನಚಿತ್ರವನ್ನು ಬ್ಯಾನ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ ಕ್ಷೇತ್ರ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ವಿಷಯವಾಗಿ 3 ದಿವಸದ ಮುಂಚಿತವಾಗಿಯೇ ನನಗೆ ಮಾತನಾಡಲು ಅವಕಾಶ ಕೊಡಬೇಕೆಂದು ತಮಗೆ ಕೇಳಿಕೊಂಡಿದ್ದೆ. 3 ದಿವಸ ಆದನಂತರ ಈ ದಿವಸ ನನಗ ಮಾತನಾಡಲು ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಚಂಬಲ್ ಕಣಿವೆಯಲ್ಲಿ ಡಕಾಯಿತಿಯಾಗಿದ್ದಂಥ ಪೂಲನ್ ದೇವಿಯ ನಿಜ ಜೀವನವನ್ನು ಪ್ರೇಕ್ಷಕರಿಗೆ ತೋರಿಸತಕ್ಕಂಥ ನೆಪದಲ್ಲಿ 'ಬ್ಯಾಂಡಿಟ್‌ಕ್ವೀನ್' ಎನ್ನುವಂಥ ಚಿತ್ರವನ್ನು ನಿರ್ಮಿಸಿ ಚಿತ್ರದ ತುಂಬಾ ಅಶ್ಲೀಲತೆಯನ್ನು ತುಂಬಿ ಮಹಿಳೆಯನ್ನು ಶೋಷಣೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರನ್ನು ಕೇಳಿಕೊಳ್ಳುತ್ತಾ ಇದ್ದೇನೆ. ಅಶ್ಲೀಲವಾದ ಭಾಷೆ, ಅಶ್ಲೀಲವಾದ ದೃಶ್ಯ, ನಿರ್ಮಾಪಕರು ಇಡೀ ಸ್ತ್ರೀಸಮುದಾಯಕ್ಕೆ ಅವಮಾನ ಮಾಡತಕ್ಕಂಥ ದೃಶ್ಯವನ್ನು ಈ ಚಿತ್ರದಲ್ಲಿ ತಂದಿದ್ದಾರೆ ಎನ್ನತಕ್ಕಂಥ ವಿಷಯ ಇಡೀ ಭಾರತ ದೇಶದಲ್ಲಿ ಇವತ್ತು ಎಲ್ಲರಿಗೂ ಕೂಡ ಗೊತ್ತಿದೆ. ಅಭಿನಯ ಚಿತ್ರಮಂದಿರ, ನರ್ತಕಿ ಚಿತ್ರಮಂದಿರ ಮತ್ತು ಗ್ಯಾಲಕ್ಸಿ ಚಿತ್ರಮಂದಿರಗಳಲ್ಲಿ ಇವತ್ತು ಕೂಡ ಈ ಚಿತ್ರ ನಡೆಯುತ್ತಿದೆ. ನರ್ತಕಿಯಲ್ಲಿ ಈಗ ಆ ಚಿತ್ರವನ್ನು ಪ್ರದರ್ಶಿಸುತ್ತಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ನಾನು ಹೇಳುವುದನ್ನು ಕೇಳಬೇಕು. ನೀವು ಅಲ್ಲಿಯೇ ಮಾತನಾಡಿಕೊಂಡಿದ್ದರೆ ನಾನು ಹೇಗೆ ಹೇಳಲು ಸಾಧ್ಯ?

ಶ್ರೀ ವಾಟಾಳ್ ನಾಗರಾಜ್ : ತಾವು ಮಾತನಾಡಿದ ಮೇಲೆ ಈ ಚಿತ್ರದ ಬಗ್ಗೆ ನಾನು ಮಾತನಾಡಲು ತಯಾರಾಗಿದ್ದೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಡೀ ಮಹಿಳಾ ಸಮುದಾಯಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಮಹನೀಯರೆಲ್ಲಾ ಗಮನಿಸಬೇಕೆಂದು ನಾನು ಕೇಳಿಕೊಂಡಿದ್ದೇನೆ. ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ ಮತ್ತು ಕೆಟ್ಟದ್ದನ್ನು ನುಡಿಯಬೇಡ ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಗಾಂಧಿಯವರು ಹೇಳಿದಂಥ ಮಾತಿನ ಅರ್ಥದ ಮೂರು ಚಿತ್ರದ ಫೋಟೋಗಳನ್ನು ಎಲ್ಲಾ ಕಡೆ ಇಟ್ಟಿರುವುದನ್ನು ನಾನು ನೋಡಿದ್ದೇನೆ. ಆದರೆ ನಮ್ಮ ಕರ್ನಾಟಕದಲ್ಲಿ ಇಂತಹ ಒಂದು ಅಶ್ಲೀವಾದಂಥ, ಅಶ್ಲೀಲವಾದ ದೃಶ್ಯ ಇರತಕ್ಕಂಥ, ಅಶ್ಲೀಲವಾದಂಥ ಸಂಭಾಷಣೆ ಇರತಕ್ಕಂಥ ಅಶ್ಲೀಲವಾದ ಭಾಷೆಯನ್ನು ಉಪಯೋಗಿಸಿರತಕ್ಕಂಥ ಒಂದು ಚಿತ್ರವನ್ನು ಇಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀಮತಿ ನೇಸರ್ಗಿಯವರು ಕ್ಷಮಿಸಬೇಕು, ತಾವು ಈಗಾಗಲೇ ಹೇಳಿದಿರಿ ಅದೇನೆಂದರೆ ಕೆಟ್ಟದ್ದನ್ನು ನೋಡಬಾರದು, ಕೆಟ್ಟದ್ದನ್ನು ಕೇಳಬಾರದು ಎಂದು. ಹಾಗಾದರೆ ಆ ಚಿತ್ರದ ಬಗ್ಗೆ ನೀವು ಹೇಗೆ ಕೇಳಿದಿರಿ? ಅದಕ್ಕಾಗಿ ನಾಗರಾಜ್‌ರವರು ಮತ್ತು ನಾವು ಕೆಟ್ಟದ್ದನ್ನು ಕೇಳಬಾರದೆಂದು ಕಿವಿ ಮುಚ್ಚಿ ಕುಳಿತುಕೊಂಡಿದ್ದೇವೆ. ನೀವು ಕೆಟ್ಟದ್ದನ್ನು ನೋಡಿದಿರಿ ಹೇಗೆ?

+ ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ನನಗೆ ಈ ಸದಸ್ಯರು, ಮಹಿಳೆಯರ ವಿಷಯ ಬಂದಾಗ ಇಷ್ಟು ಹಗುರವಾಗಿ ತೆಗೆದುಕೊಳ್ಳುವುದು ಸರಿಯಲ್ಲವೆಂದು ಸನಗನ್ನಿಸುತ್ತದೆ. ಇನ್ನೂ ನಾನು ಹೇಳಬೇಕಾದ ವಿಷಯಗಳು ಇವೆ. ಏನಾಗಿದೆ ವಿಷಯ ಎಂದರೆ, ಚಿತ್ರದ ಕಥೆ ಸಂಪೂರ್ಣವಾಗಿ ನಿಜವಲ್ಲ ಎಂದು ಪೂಲನ್ ದೇವಿಯವರೇ ಹೋಗಿ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು. ಅವರಿಗೆ 25 ಲಕ್ಷ ರೂಪಾಯಿ ಕೊಟ್ಟು ಅವರ ಬಾಯಿ ಮುಚ್ಚಿಸಿದರು. ಅವರ ಬಾಯಿ ಮುಚ್ಚಿಸಿ ಆಕೆಗೆ ಆಗಿರುವಂಥ ಅವಮಾನವನ್ನು ಇವತ್ತಿನವರೆಗೂ ಕೂಡ ಉಳಿಸಿಕೊಳ್ಳುವಂತೆ ಮಾಡಿದರು. ಜಸ್ಟೀಸ್ ಲೆಂಟಿನ್ ಅವರ ಮುಂದೆ ಈ ಚಿತ್ರವನ್ನು ಪ್ರದರ್ಶನ ಮಾಡಬಾರದೆಂದು ಹೇಳಿ ಅವರ ಬಳಿಗೆ ತೆಗೆದುಕೊಂಡು ಹೋದರು. ಜಸ್ಟೀಸ್ ಲೆಂಟಿನ್‌ರವರು 13 ದೃಶ್ಯಗಳು ಅಶ್ಲೀಲವಾಗಿದೆ ಅದನ್ನ ಕಟ್ ಮಾಡಬೇಕೆಂದು ಹೇಳಿದರು. ಪುನಃ 3 ದೃಶ್ಯಗಳನ್ನು ತೆಗೆಯಿರಿ ಎಂದು ಹೇಳಿದರು. ಆದರೂ ಆ ದೃಶ್ಯಗಳನ್ನು ಇವತ್ತಿನವರೆಗೂ ತೆಗಿದಿಲ್ಲ. ಬಿಹಾರದ ಮುಖ್ಯಮಂತ್ರಿಗಳಿಗೂ ಕೂಡ ಇದರ ಬಗ್ಗೆ ಗೊತ್ತಿದೆ. ಬಿಹಾರ್‌ನಲ್ಲಿ ಇವತ್ತು ಈ ಚಿತ್ರದ ವಿರುದ್ಧ ಮಹಿಳೆಯರ ದೊಡ್ಡ ರ್‍ಯಾಲಿಯಾಗಿದೆ. ರ್‍ಯಾಲಿಯಾಗಿ ಪೂಲನ್ ದೇವಿಯವರ ಜಾತಿಯ ಬಗ್ಗೆ ಅಗೌರವವಾದಂತಹ ಭಾಷೆ ಇದೆ ಎಂದು ಹೇಳಿ ಆ ದೃಶ್ಯವನ್ನು ಕೂಡ ಬ್ಯಾನ್ ಮಾಡಬೇಕೆಂದು ಮಹಿಳೆಯರು ರ್‍ಯಾಲಿಯನ್ನು ಮಾಡಿದ್ದಾರೆ. ಅಷ್ಟೇ ಅಲ್ಲ, ಪೂಲನ್ ದೇವಿಯವರ ನೆಪದಲ್ಲಿ ಅಲ್ಲಿ ಒಬ್ಬ ನಟಿ ಇದ್ದಾರೆ, ಅವರ ಹೆಸರು ಬಿಸ್ವಾಸ್ ಎಂದು ಕಾಣುತ್ತದೆ. ಸೀಮಾ ಬೀಸ್ವಾಸ್ ಅವಳನ್ನು ಏನು ಮಾಡಿದ್ದಾರೆ ಎಂದರೆ, ನಗ್ನವಾಗಿ ಕೆರೆಯಲ್ಲಿ, ನದಿಯಲ್ಲಿ ನೀರನ್ನು ತೆಗೆದುಕೊಂಡು ಬರುವಂತಹ ದೃಶ್ಯದಲ್ಲಿ ಪ್ರದರ್ಶನ ಮಾಡಿದ್ದಾರೆ. ನಾನು ನಿಮ್ಮನ್ನು ಕೇಳುವುದು ಏನೆಂದರೆ ಈ ರೀತಿಯಾದಂತಹ ಚಿತ್ರ ಪ್ರದರ್ಶನ ಮಾಡಬಹುದೇ? ಮಹಾತ್ಮಗಾಂಧೀಜಿಯವರು ಕೆಟ್ಟದ್ದನ್ನು ನೋಡಬೇಡ ಎಂದು ಹೇಳಿದ್ದಾರೆ. ನಾನು ಆ ಚಿತ್ರವನ್ನು ನೋಡಲಿಕ್ಕೆ ಹೋಗಿಲ್ಲ. ಆದರೆ ಇಡೀ ಮಹಿಳೆಯರ 'ಅಭಿನಯ ಚಿತ್ರ ಮಂದಿರದ' ಮುಂದೆ ಇದರ ವಿರುದ್ಧ ಪ್ರದರ್ಶನವನ್ನು ಮಾಡಿ ಇದನ್ನು ರದ್ದು ಮಾಡಬೇಕೆಂದು ಹೇಳಿ ಒಂದು ಶನಿವಾರದಂದು ಧರಣಿ ಸತ್ಯಾಗ್ರಹವನ್ನು ಸಹಿತ ಮಾಡಿದ್ದಾರೆ. ಆದಾದ ನಂತರ ನಮ್ಮ ಕಮೀಷನರ್‌ರವರು ಇದರ ಬಗ್ಗೆ ನೋಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆದರೆ ಇದುವರೆಗೂ ಸಹ ಈ ಚಿತ್ರ ಪ್ರದರ್ಶನ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಬ್ಯಾಂಡಿಟ್‌ಕ್ವೀನ್ ಚಿತ್ರವನ್ನು ಯಾರಿಗೋಸ್ಕರವಾಗಿ ತಯಾರು ಮಾಡಿದರು? ಇಂಗ್ಲೇಡ್‌ನಲ್ಲಿರತಕ್ಕಂಥಹ ಬಿ.ಬಿ.ಸಿ. ಚಾನಲ್‌ಗೋಸ್ಕರವಾಗಿ ಕರ್ನಾಟಕ ಅಥವಾ ಭಾರತ ದೇಶಕೋಸ್ಕರವಾಗಿ ಈ ಚಿತ್ರವನ್ನು ತಯಾರು ಮಾಡಿದುದ್ದು ಅಲ್ಲ. ಈ ಚಿತ್ರವನ್ನು ಬಿ.ಬಿ.ಸಿ ಚಾನಲಗೋಸ್ಕರ ಕೇವಲ ನಾಲ್ಕು ಲಕ್ಷ ರೂಪಾಯಿಗೋಸ್ಕರವಾಗಿ ತಯಾರು ಮಾಡಿ ಕೊಟ್ಟರು. ಇದರ ಪ್ರಡ್ಯೂಸರ್ ಇಂಡಿಯಾದಲ್ಲಿ ಬಾಬಿಬೇಲಿ ಎನ್ನತಕ್ಕಂಥವರು ಒಂದು ಕೋಟಿ ಐದು ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಬ್ಯಾಂಡಿಟ್ ಕ್ವೀನ್ ಚಿತ್ರವನ್ನು ಕೊಂಡುಕೊಂಡರು. ಕೊಂಡುಕೊಂಡ ನಂತರ ಈ ಚಿತ್ರವನ್ನು ಅಮಿತಾ ಬಚ್ಚನ್ ಕಾರ್ಪೂರೇಷನ್ ಲಿಮಿಟೆಡ್ ಇವರಿಗೆ ವಿತರಣೆಗಾಗಿ ಕೊಟ್ಟಿದ್ದಾರೆ. ಅವರಿಂದ ಕರ್ನಾಟಕದಲ್ಲಿ ವಸುಪ್ರದ ಎಂಟರ್‌ಪ್ರೈಸಸ್‌ನ ಮಾಲೀಕರಾದ ಸುಧೀರ್ ಎನ್ನತಕ್ಕಂಥವರು ಈ ಚಿತ್ರವನ್ನು ಕರ್ನಾಟಕದಲ್ಲಿ ವಿತರಣೆ ಮಾಡಲು ಕೊಂಡುಕೊಂಡಿದ್ದಾರೆ. ಕೊಂಡುಕೊಂಡು ಬೆಂಗಳೂರಿನ

ನರ್ತಕಿ, ಗ್ಯಾಲಕ್ಸಿ, ಅಭಿನಯ ಈ ಮೂರು ಚಿತ್ರಮಂದಿರಗಳಲ್ಲಿ ಚಿತ್ರವನ್ನು ಪ್ರದರ್ಶಿಸುತ್ತಿದ್ದಾರೆ. ಮತ್ತು ಅದು ಅಲ್ಲದೇ ಧಾರವಾಡ ಮತ್ತು ಬೆಳಗಾಂನಲ್ಲಿಯು ಕೂಡ ಈ ಬ್ಯಾಂಡಿಟ್‌ಕ್ವೀನ್ ಚಿತ್ರವನ್ನು ಪ್ರದರ್ಶಿಸುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರಿನಲ್ಲಿರತಕ್ಕಂಥ ಕಾಲೇಜಿನ, ಹೈಸ್ಕೂಲಿನ ಮಹಿಳಾ ವಿದ್ಯಾರ್ಥಿಗಳು ಈ ಚಿತ್ರದ ವಿರುದ್ಧ ದೊಡ್ಡ ಆಂಧೋಲನವನ್ನು ಮಾಡಬೇಕು ಈ ಚಿತ್ರ ಪ್ರದರ್ಶನವನ್ನು ನಿಲ್ಲಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಮೊನ್ನೆ ನಮ್ಮ ಕಾನೂನು ಮಂತ್ರಿಗಳು ಹೇಳುತ್ತಿದ್ದನ್ನು ನಾನು ಕೇಳಿಸಿಕೊಂಡೆ. ಅವರು ಏನು ಹೇಳಿದರು ಎಂದೆರ ಅಶ್ಲೀಲವಾಗಿರುವುದಕ್ಕೆ ಒಂದು ರೀತಿಯಾದಂತಹ ಹಿಂಸೆ ಚಿತ್ರಗಳಿಗೆ, ಇಂತಹ ಚಿತ್ರಗಳಿಗೆ ತಾವು ಸಬ್ಸಿಡಿಯನ್ನು ಕೊಡುವುದಿಲ್ಲ ಎಂದು ಇಂತಹ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುವುದಿಲ್ಲ ಎಂದು ಹೇಳುವವರು, ಇಂತಹ ಚಿತ್ರಗಳನ್ನು ಪ್ರದರ್ಶನವನ್ನು ಮಾಡಲು ಯಾವ ರೀತಿಯಲ್ಲಿ ಅನುಮತಿಯನ್ನು ಕೊಡುತ್ತೀರಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನಕೊಡಬೇಕು. ಹೈದರಾಬಾದನಲ್ಲಿ ಕರ್ನಾಟಕದವರು ಚಿತ್ರಿಸಿದ " ರತಿ ವಿಜ್ಞಾನ" ಎಂಬ ಚಿತ್ರದಲ್ಲಿ ಬರೀ ಅಶ್ಲೀಲವಾದಂತಹ ದೃಶ್ಯಗಳು ಈ ಚಿತ್ರದಲ್ಲಿ ಇದೆ ಎಂದು ಆ ಚಿತ್ರವನ್ನು ಬ್ಯಾನ್ ಮಾಡಿದ್ದಾರೆ. ಆದರೆ ಈ ಚಿತ್ರ ವಿಡಿಯೋ ಪಾರ್ಲರ್‌ಗಳಲ್ಲಿ ಪ್ರದರ್ಶನಗೊಳ್ಳುತ್ತಿದೆ. ನೀವು ಇದರ ವಿರುದ್ಧ ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ? ಅಶ್ಲೀಲವಾದಂತಹ ಭಿತ್ತಿ ಚಿತ್ರಗಳು ಇರಬಾರದೆಂದು ತಾವು ಹೇಳುತ್ತೀರಿ, ಕಾನೂನನ್ನೂ ಸಹ ಇದರ ಬಗ್ಗೆ ತಂದಿರುತ್ತೀರಿ. ಅಶ್ಲೀಲವಾದಂತಹ ದೃಶ್ಯಗಳು ಚಿತ್ರದಲ್ಲಿ ಇರಬಾರದೆಂದು ಹೇಳುತ್ತೀರಿ, ಸೆನ್ಸಾರ್ ಬೋರ್ಡ್‌ನವರು ಇದರ ಬಗ್ಗೆ ಏನು ಮಾಡುತ್ತಿದ್ದಾರೆ, ಕೈಕಟ್ಟಿಕೊಂಡು ಕುಳಿತಿರುತ್ತಾರೆಯೇ? ಇವರು ಯಾವ ಕಾರ್ಯವನ್ನು ನಿರ್ವಹಿಸುವುದಕ್ಕೆ ಇದ್ದಾರೆ ಅಥವಾ ನಮ್ಮ ಮಹನೀಯರ ಲೈಂಗಿಕ ಆಸಕ್ತತೆಯನ್ನು ತೀರಿಸುವುದಕೋಸ್ಕರವಾಗಿ ಇಂತಹ ಚಿತ್ರಗಳನ್ನು ಮಾಡಲಿಕ್ಕೆ ಹೊರಟಿದ್ದಾರಾ ಎನ್ನತಕ್ಕಂಥಹ ಪ್ರಶ್ನೆ ಇವತ್ತು ಇಡೀ ಮಹಿಳೆಯರ ಮುಂದೆ ಇದೆ. ಆದುದರಿಂದ ನಾನು ಕೇಳುವುದು ಏನೆಂದರೆ ಇಂತಹ ಪ್ರದರ್ಶನಗಳು ಕರ್ನಾಟಕದಲ್ಲಿ ಪ್ರದರ್ಶಿಸಲು ದಯವಿಟ್ಟು ಅವಕಾಶವನ್ನು ಕೊಡಬೇಡಿ. ಇವತ್ತು'ಜಿ.ಟಿ.ವಿ.ಯಲ್ಲಿ ಮತ್ತು ಕೆಟ್ಟ ಕೆಟ್ಟ ಟಿ.ವಿ. ಚಾನಲ್ ಗಳಲ್ಲಿ ಮಹಿಳೆಯರನ್ನು ವಿಕೃತವಾಗಿ, ಅಶ್ಲೀಲವಾಗಿ, ರೇಪ್ ದೃಶ್ಯಗಳು ಇಂತವುಗಳನ್ನು ತೋರಿಸುತ್ತಿದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಕೇಂದ್ರ ಸರ್ಕಾರವಾಗಲಿ, ಅಥವಾ ನಮ್ಮ ರಾಜ್ಯ ಸರ್ಕಾರವಾಗಲಿ ಈ ಚಿತ್ರಗಳಿಗೆ ಕಡಿವಾಣವನ್ನು ಹಾಕಲೇಬೇಕು. ಇಂತಹ ಪ್ರದರ್ಶನವನ್ನು ನಡೆಸುವುದಕ್ಕೆ ತಾವು ದಯವಿಟ್ಟು ಅವಕಾಶವನ್ನು ಮಾಡಿ ಕೊಡಲೇ ಬಾರದು. ಈ ಬ್ಯಾಂಡಿಟ್ ಕ್ವೀನ್ ಚಿತ್ರವನ್ನು ಕರ್ನಾಟಕದಲ್ಲಿ ಬ್ಯಾನ್ ಮಾಡಲಿಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಂಡು ಅಭಿನಯ ಚಿತ್ರದ ಮಾಲೀಕರು ಮತ್ತು ಈ ಚಿತ್ರವನ್ನು ಪ್ರದರ್ಶನ ಮಾಡುತ್ತಿರುವ ಇತರ ಚಿತ್ರಮಂದಿರದ ಮಾಲೀಕರು ಯಾರು ಇದ್ದಾರೆ ಅವರಿಗೆ ಅಂತಹ ಚಿತ್ರಗಳನ್ನು ಪ್ರದರ್ಶನ ಮಾಡಲಿಕ್ಕೆ ತಾವು ಅವಕಾಶವನ್ನು ಮಾಡಿಕೊಡಬಾರದು. ಆಮೇಲೆ ಬೆಂಗಳೂರಿನಲ್ಲಿರತಕ್ಕಂಥ ಸಂಗಮ್ ಚಿತ್ರಮಂದಿರ, ಹಿಮಾಲಯ ಚಿತ್ರಮಂದಿರ, ಕೆಂಪೇಗೌಡ, ರೆಕ್ಸ್, ಇಂಪೀರಿಯಲ್, ಗ್ಯಾಲಕ್ಸಿ ಚಿತ್ರಮಂದಿರಗಳಲ್ಲಿ ಬರೀ ಅಶ್ಲೀಲವಾದಂತಹ ಚಿತ್ರಗಳ ಪ್ರದರ್ಶನವೇ ನಡೆಯುತ್ತಿದೆ. ಆದುದರಿಂದ ದಯವಿಟ್ಟು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಹರಿಸಬೇಕು.

ಅಶ್ಲೀಲವಾದಂತಹ ಭಿತ್ತಿ ಚಿತ್ರಗಳು ಈ ಚಿತ್ರಮಂದಿರದ ಮುಂದೆ ಇರುತ್ತವೆ. ಪ್ರದರ್ಶನಗಳು ನಡೆಯುತ್ತಲೇ ಇರುತ್ತವೆ. ಇಂತಹ ಚಿತ್ರಗಳನ್ನು ತಂದು ಪ್ರದರ್ಶನವನ್ನು ಮಾಡುವುದರಿಂದ ನಮ್ಮ ಮುಂದೆ ಇರತಕ್ಕಂತಹ ಸಣ್ಣ ಸಣ್ಣ ಮಕ್ಕಳ ಮನಸ್ಸು ವಿಕೃತಗೊಂಡು ಅವರು ಯಾವುದೇ ಕೆಲಸವನ್ನು ಮಾಡದೇ, ಓದದೇ ಈ ಕಾಮವಿಕೃತವಾಗಿರುವುದನ್ನು ನೋಡಿ ಅವರ ಮನಸ್ಸು ಹದಗೆಟ್ಟು ಹೋಗಿ ಮಕ್ಕಳ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಕರ್ನಾಟಕ ಇವತ್ತು ಮತ್ತೊಂದು ಕೆಟ್ಟ ಪ್ರದೇಶವಾಗದಂತೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದರೆ ದಯವಿಟ್ಟು ಇಂತಹ ಚಿತ್ರ ಪ್ರದರ್ಶನವನ್ನು ತಾವು ತೆಗೆಸಿ ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ನೀವು ಏಕೆ ಅದನ್ನು ನೋಡಲಿಕ್ಕೆ ಹೋದಿರಿ? ಕೆಟ್ಟದ್ದನ್ನು ನೋಡಬಾರದು ಎಂದು ಗಾಂಧೀಜಿಯವರು ಹೇಳಿದ ಮೇಲೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಸದಸ್ಯರು ಏನು ಮಾಡುತ್ತಾರೆ ಎಂಬುದು ನನಗೆ ಗೊತ್ತಿದೆ. ನೀವುಗಳೆಲ್ಲರೂ ನೋಡಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವು ಆ ಚಿತ್ರವನ್ನು ನೋಡಿದ್ದೇವೆ. ಆದರೆ ಮೇಡಂನವರು ಯಾವಾಗ ಆ ಚಿತ್ರವನ್ನು ನೋಡಿದರು?.

(ಗೊಂದಲ)

ಶ್ರೀ ಜೆ. ಬಿ. ಶಿವಕುಮಾರ್ : ನೀವು ಹೇಳಿದ್ದನ್ನು ನಾನು ಅಬ್ಜೆಕ್ಷನ್ ಮಾಡಲಿಲ್ಲ. ನಾನೇನೂ ವಿರೋಧ ಮಾಡಲಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ನಿಮ್ಮ ಹೆಣ್ಣು ಮಕ್ಕಳು ಹೋಗಿ ಆ ಚಿತ್ರವನ್ನು ನೋಡಿದರೆ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಜೆ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ನೀವು ಚೆನ್ನಾಗಿ ಹೇಳುತ್ತಿದ್ದೀರಿ, ಸ್ವಲ್ಪ ನಿಧಾನವಾಗಿ ಹೇಳಿ, ಪುಲ್‌ಸ್ಟಾಫ್ ಮತ್ತು ಕಾಮ ಕೊಡಿ ಎಂದು ಹೇಳಿದರೆ, ಹೇಳಿದ ತಕ್ಷಣ ಮೇಲೆ ಬಿದ್ದುಬಿಟ್ಟರೆ ಹೇಗೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಆಯಿತು ಕೊಡೋಣ. ಪುಲಸ್ಟಾಫ್ ಕೊಡುತ್ತೇವೆ. ಆದರೆ ಕಾಮವನ್ನು ಕೊಡುವುದಿಲ್ಲ. ಇಲ್ಲ ಎಂದು ಹೇಳುವುದಕ್ಕೆ ತಯಾರು ಇದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಮತ್ತು ಮಾರುತಿ ಪವಾರ್‌ರವರು ಒಂದು ವಿಷಯದ ಬಗ್ಗೆ ಮಾತನಾಡಲು ನಿಯಮದ ಪ್ರಕಾರ ತಂದಿದ್ದೇವೆ. ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡದೇ ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಹೇಗೆ?

ಉಪಾಧ್ಯಕ್ಷರು : ಶೂನ್ಯವೇಳೆಯಲ್ಲಿ ಸಹ ಮಾಡಿರತಕ್ಕಂಥದ್ದು ಯಾವುದನ್ನೂ ತೆಗೆದುಕೊಳ್ಳುವುದಿಲ್ಲ. ನೀವು ಕಳುಹಿಸಿದ್ದೀರಿ, ಹಾಗಿದ್ದರೆ ಅವಕಾಶವನ್ನು ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೊಸ ಸದಸ್ಯರಿಗೆ ಪ್ರೊತ್ಸಾಹ ಮಾಡಲಿಕ್ಕೆ ನಾವು ಇದ್ದೇವೆ. ತೊಂದರೆ ಏನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಈ ಚಿತ್ರದಿಂದ ಅಶ್ಲೀಲ ಮತ್ತು ನಗ್ನತೆಯನ್ನು ವಿವೇಚನೆ ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಯಾರು ಒಂದು ಸಾಮಾನ್ಯ ಮಹಿಳೆಯರ ಮೇಲೆ ದೌರ್ಜನ್ಯವಾಗಿದೆ ಎನ್ನುವುದನ್ನು ಪ್ರತಿಬಿಂಬಿಸುವುದರ ಬದಲು ಈ ರೀತಿಯ ಅಶ್ಲೀಲ ಚಿತ್ರಗಳಿಂದ ಸಮಾಜದಲ್ಲಿ ಮಾನಸಿಕವಾಗಿ ಆಗುತ್ತಿರುವ ಪರಿಣಾಮಗಳನ್ನು ಗಮನಿಸಬೇಕು. ಜೊತೆಯಲ್ಲಿ ಕೆಲವು ಜನರು ದುಡ್ಡು ಮಾಡುವಂತಹ ನೆಪದಲ್ಲಿ ಈ ರೀತಿಯ ಚಿತ್ರಗಳನ್ನು ಚಿತ್ರಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಇದು ಕೇವಲ ಒಂದು ಅಶ್ಲೀಲತೆಗೆ ಮಾತ್ರವಲ್ಲ ನಾಳೆಯ ದಿವಸ ಕಾನೂನಿನ ವ್ಯವಸ್ಥೆಗೂ ಕೂಡ ತೊಂದರೆಯಾಗುತ್ತದೆ. ಇದರಿಂದಾಗಿ ಮಹಿಳೆಯರು ಬೀದಿಗೆ ಬರುತ್ತಾರೆ. ಬೀದಿಗೆ ಒಂದು ತೊಂದರೆಯನ್ನು ಮಾಡಿದಂತಹ ಸಂದರ್ಭದಲ್ಲಿ ಮತ್ತೆ ಕಾನೂನಿನ ತೊಂದರೆ ಕೂಡ ಆಗುತ್ತಿದೆ. ಇದನ್ನೆಲ್ಲವನ್ನೂ ಪರಿಗಣನೆಯನ್ನು ಮಾಡಬೇಕು. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹೇಳಿದ ಹಾಗೆ ನಾಳೆ ಈ ಸರ್ಕಾರ ಗಂಭೀರವಾಗಿ ಪರಿಗಣನೆ ಮಾಡದೇ ಇದ್ದರೆ ಮಹಿಳೆಯರು ಇದರ ವಿರುದ್ಧ ಬೀದಿಗೆ ಇಳಿದು ಕಾನೂನಿನ ವ್ಯವಸ್ಥೆಗೆ ತೊಂದರೆಯಾಗುತ್ತದೆ. ಇದೆಲ್ಲವನ್ನೂ ಪರಿಗಣನೆಯನ್ನು ಮಾಡಿ ಸರ್ಕಾರ ಈ ಒಂದು ಚಿತ್ರವನ್ನು ಕರ್ನಾಟಕ ರಾಜ್ಯದಲ್ಲಿ ನಿಷೇಧವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಸಮಾಜಕ್ಕೆ ಏನು ತೋರಿಸಬೇಕೆಂಬ, ಉದ್ದೇಶವನ್ನು ಇಟ್ಟುಕೊಂಡು ಆ ಚಿತ್ರವನ್ನು ನಿರ್ಮಾಪಕರು, ನಿರ್ದೇಶಕರು ಚಿತ್ರಿಸಿದರೋ ಆದರೆ ಆ ಉದ್ದೇಶವನ್ನು ಮರೆತು ಕೇವಲ ಅಶ್ಲೀಲ ಚಿತ್ರಗಳನ್ನು ಹಾಕಿ ಮಾಡಿದ್ದಾರೆ. ಆದುದರಿಂದ ದಯವಿಟ್ಟು ಸಂಪೂರ್ಣವಾಗಿ ನಗ್ನವನ್ನು ಆ ಚಿತ್ರದಲ್ಲಿ ತೋರಿಸಿದ್ದಾರೆ. ಆದುದರಿಂದ ಇವತ್ತು ಯುವಕರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನು ಬೀರುವಂತಹ ಪ್ರಸಂಗ ಇದೆ. ಕುಟುಂಬ ಸಮೇತರಾಗಿ ಹೋಗಿ ನೋಡದೇ ಇರತಕ್ಕಂಥಹ ಚಿತ್ರ ಇದಾಗಿದೆ. ಇದರಿಂದ ಸಮಾಜದ ಮೇಲೆ ದುಷ್ಪರಿಣಾಮವಾಗುತ್ತಿದ್ದು ದಯವಿಟ್ಟು ಈ ಚಿತ್ರವನ್ನು ಕರ್ನಾಟಕದಲ್ಲಿ ಬ್ಯಾನ್ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು : ಇವರುಗಳು ಈ ಚಿತ್ರವನ್ನು ಮೂರು ಮೂರು ಸಾರಿ ನೋಡಿಕೊಂಡು ಬಂದು ಇಲ್ಲಿ ಸರಿ ಇಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ಚಿತ್ರದ ಬಗ್ಗೆ ನಮ್ಮ ಸದಸ್ಯ ಮಿತ್ರರು ಮಾತನಾಡುತ್ತಾರಲ್ಲಾ, ಇವತ್ತು ಮಹಿಳೆಯರು ಆ ಚಿತ್ರವನ್ನು ನೋಡಿದರೆ ನಿಮ್ಮ ಗತಿ ಏನಾಗುತ್ತದೆ ಎಂಬುದರ ಬಗ್ಗೆ ಇವತ್ತು ಆ ಚಿತ್ರವನ್ನು ನೋಡಬೇಕಾಗುತ್ತದೆ.

(ಗೊಂದಲ)

+ ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಚಿತ್ರದ ಬಗ್ಗೆ ಒಂದು ಸಮಗ್ರವಾದಂತಹ ಚರ್ಚೆ ನಡೆದಿದೆ. ನಮಗೂ ಕೂಡ ಕುತೂಹಲವಾಯಿತು. ಹೇಗೆ ಇದೆ ಈ ಚಿತ್ರ ನೋಡಬೇಕೆಂದು ನಿಶ್ಚಯವಾಯಿತು. ಆದರೆ ಆ ಚಿತ್ರ ಕನ್ನಡ ಭಾಷೆಯದು ಅಲ್ಲ. ನಾನು ಕನ್ನಡ ಭಾಷೆಯ ಚಿತ್ರವನ್ನು ಬಿಟ್ಟು ಬೇರೆ ಭಾಷೆಯ ಚಿತ್ರಗಳನ್ನು ನೋಡುವುದಿಲ್ಲ. ನನಗೆ ಇದೊಂದು ಪರಿಸ್ಥಿತಿ. ನೋಡುವವರನ್ನು ಆದರೂ ಕಳುಹಿಸಿ ಚಿತ್ರ ಹೇಗೆ ಇದೆ ಎಂದು ನೋಡಿಸೋಣ. ಒಂದು ಚಿತ್ರ ಬಿಡುಗಡೆಯಾಗಬೇಕಾದರೆ, ಏಕಾಏಕಿ ಅದು ಬಿಡುಗಡೆಯಾಗುವುದಿಲ್ಲ. ಅದಕ್ಕೆ ಸೆನ್ಸಾರ್ ಮಂಡಳಿ ಎಂದು ಒಂದು ಇದೆ. ಆ ಸೆನ್ಸಾರ್ ಮಂಡಳಿಯವರು ಒಂದು ಚಿತ್ರವನ್ನು ಬಿಡುಗಡೆ ಮಾಡಬೇಕಾದರೆ ಏನೇನು ಕೆಲವು ಷರತ್ತುಗಳು ಇರುತ್ತವೆ ಆ ಷರತ್ತುಗಳನ್ನು ಮೀರಿದರೆ ಆ ಚಿತ್ರವನ್ನು ಬಿಡುಗಡೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಷರತ್ತು ಮೀರಿ ಚಿತ್ರಗಳನ್ನು ಚಿತ್ರಿಸುವುದು ಉಂಟು. ಇತ್ತಿಚಿನ ದಿನಗಳಲ್ಲಿ ಸೆನ್ಸಾರ್ ಮಂಡಳಿಗಳ ಬಗ್ಗೆಯೂ ನಮಗೆ ಅನುಮಾನ ಬಂದಿದೆ ಅನೇಕ ಚಿತ್ರಗಳನ್ನು ಜನರು ನೋಡಬೇಕೆಂದು ಹೇಳಿ ಸೆನ್ಸಾರ್ ಮಂಡಳಿಗಳಿಗೆ ತೋರಿಸತಕ್ಕಂತಹ ಚಿತ್ರಗಳೇ ಬೇರೆ, ಮತ್ತು ಪ್ರದರ್ಶನಕ್ಕೆ ಬಿಡುಗಡೆ ಮಾಡತಕ್ಕಂಥಹ ಚಿತ್ರಗಳೇ ಬೇರೆ. ಇದು ನಡೆಯುತ್ತದೆ. ಆದರೆ ಯಾವುದು ಅಶ್ಲೀಲ ಎನ್ನತಕ್ಕಂಥದ್ದು ಇದುವರೆಗೂ ನಿರ್ಧಾರವಾಗಿಲ್ಲ. ಅಶ್ಲೀಲ ಯಾವುದು? ನಗ್ನ ಯಾವುದು? ತಾವು ಇತ್ತೀಚಿನ ದಿನಗಳಲ್ಲಿ ಹೆಣ್ಣುಮಕ್ಕಳು ಹಾಕಿಕೊಳ್ಳುವ ಉಡುಪುಗಳನ್ನು ನೋಡುತ್ತಿರುವಿರಿ, ಒಂದೊಂದು ರಾಜ್ಯದಲ್ಲಿ ಮಹಿಳೆಯರು ಹಾಕಿಕೊಳ್ಳುವಂತಹ ಉಡುಪುಗಳು ಬೇರೆ ಬೇರೆ. ಒಂದೊಂದು ಜಿಲ್ಲೆಯವರು ಹಾಕಿಕೊಳ್ಳುವಂತಹ ಉಡುಪುಗಳು ಬೇರೆಬೇರೆ. ಈಗ ಉಡುಪುಗಳು ಪ್ರದರ್ಶನಕ್ಕೆ ಬರುತ್ತಿವೆ ತಾವು ನೋಡಿರಬಹುದು. ಆದರೆ ನೋಡುವವರ ದೃಷ್ಟಿಯಲ್ಲಿ ನಮಗೆ ನಗ್ನತೆಯು ಕಾಣುತ್ತದೆ. ಆದುದರಿಂದ ನೋಡುವವರ ದೃಷ್ಟಿಯಲ್ಲಿ ಅದು....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕಣ್ಣಿನ ದೃಷ್ಟಿಯಿಂದ ಬಂದಂಥದ್ದು ಆ ಮಾನಸಿಕ ದೃಷ್ಟಿಗೆ ಏನೇನು ಕಾಣುತ್ತದೆ ಅದನ್ನು ನೋಡಿ ನಮ್ಮ ರೀತಿಯಲ್ಲಿ ನಾವು ಸಂತೋಷಪಡುತ್ತೇವೆ. ಒಬ್ಬೊಬ್ಬರದ್ದೂ ಒಂದೊಂದು ದೃಷ್ಟಿ. ಇದು ದೃಷ್ಟಿಯಮೇಲೆ ಆಗುವಂಥ ಪರಿಣಾಮವೇ ಹೊರತು, ದೃಷ್ಟಿದೋಷವಲ್ಲ. ದೃಷ್ಟಿಯಮೇಲೆ ಆಗುವಂಥ ದೋಷವೇ ಹೊರತು ಬೇರೆ ಅಲ್ಲ. ನೀವು ಚಿತ್ರವನ್ನು ನೋಡದೆಯೇ...

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಸೆನ್ಸಾರ್ ಬೋರ್ಡನಲ್ಲಿರುವವರೂ ಕೂಡ ಸಂಸಾರಸ್ಥರೇ, ಸನ್ಯಾಸಿಗಳು ಯಾರೂ ಅಲ್ಲಿಲ್ಲ. ಹುಡುಗರು ಯಾರೂ ಇಲ್ಲ. ಸೆನ್ಸಾರ್ ಬೋರ್ಡನಲ್ಲಿ ಎಲ್ಲರೂ ಸಂಸಾರಸ್ಥರೇ ಇದ್ದಾರೆ. ಅವರೇನು ಕಣ್ಣುಮುಚ್ಚಿಕೊಂಡಿರುತ್ತಾರೆಯೆ?

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಈ ಚಿತ್ರಕ್ಕೆ ಸಂಬಂಧಪಟ್ಟಂತೆ ಸೆನ್ಸಾರ್ ಬೋರ್ಡನ ಮೆಂಬರ್; ಒಬ್ಬರು ರಿಸೈನ್ ಮಾಡಿದ್ದಾರೆ..

ಶ್ರೀವಾಟಾಳ್ ನಾಗರಾಜ್ : ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಆ ಚಿತ್ರವನ್ನೇ ನೋಡದೆ ಅವರ ದೃಷ್ಟಿಯಲ್ಲಿ ನಗ್ನತೆಯ ದೃಷ್ಟಿ ಕಾಣುತ್ತದೆ. ಇನ್ನು ಆ ಚಿತ್ರವನ್ನು ಇವರು ನೋಡಿದರೆ ಅದರ ಪರಿಸ್ಥಿತಿ ಏನು? ತಮಗೆ ಗೊತ್ತಿರುವಂತೆ ಇತ್ತೀಚಿನ ಉಡುಪುಗಳು..

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಉಡುಪಿನ ಬಗ್ಗೆ ಬೇರೆ ದಿವಸ ಚರ್ಚೆ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಕೂಡಿರಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಉಪಾಧ್ಯಕ್ಷರೆ, ವಿಷಯದ ಮಾಹಿತಿ ಇಟ್ಟುಕೊಂಡು ಇಲ್ಲಿ ಚರ್ಚಮಾಡಿದರೆ ಅದರಿಂದ ಅನುಕೂಲವಾಗುತ್ತದೆ. ಆದರೆ ವಿಷಯ ಬಗ್ಗೆ ಮಾಹಿತಿಯೇ ಇಲ್ಲದೆ ಚರ್ಚೆ ಮಾಡಿದರೆ ಅದು ಸರಿಯಾಗಿ ಆಗುವುದಿಲ್ಲ. ರಾಜ್ಯದಲ್ಲಿ ಹೆಣ್ಣುಮಕ್ಕಳು ಹೋರಾಟಕ್ಕೆ ಸಿದ್ಧವಾಗಿದ್ದಾರೆ. ಇದರ ಜೊತೆಗೆ ಕಾಲೇಜಿನ ಯುವಕರೂ ಕೂಡ ಹೋರಾಟಕ್ಕೆ ಸಿದ್ದವಾಗಿದ್ದಾರೆ.

ಉಪಾಧ್ಯಕ್ಷರು : ಆಯಿತು ಕೂಡಿ. ಅವರು ಎಲ್ಲವನ್ನೂ ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವೇ ಹೀಗೆ ಹೇಳಿದರೆ ಹೇಗೆ. ನಾನೂ ಹೇಳುವುದಕ್ಕೆ ಅವಕಾಶವನ್ನು ಕೊಡಿ. ನನ್ನದು ಆದಮೇಲೆ ನೀವೂ ಹೇಳಿ. ನನ್ನ ವಾದ ಸರಿಯಿಲ್ಲವೆಂದು ಹೇಳುವುದಾದರೆ ಹೇಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ,.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಈಗ ತಾವು ನನಗ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

ಉಪಾಧ್ಯಕ್ಷರು : ತಮಗೆ ಅವಕಾಶ ಕೊಟ್ಟಿದ್ದು ಬಹಳವಾಯಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದ್ದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ. ಅಮೆರಿಕಾದಲ್ಲಿ ಈಗ ಹೊಸ ಕನ್ನಡಕ ಬಂದಿದೆ. ಆ ಕನ್ನಡಕವನ್ನು ಕಣ್ಣಿಗೆ ಹಾಕಿಕೊಂಡರೆ **xxx** ಆ ರೀತಿಯ ಕನ್ನಡಕಗಳು ಅಮೆರಿಕಾದಲ್ಲಿ ಬಂದಿವೆ.

(ಗೊಂದಲ)

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಸಭಾಧ್ಯಕ್ಷರೆ, ಈ ವಾದವನ್ನು ನಿಲ್ಲಿಸಬೇಕು. ಇದು ಸದನಕ್ಕೆ ಗೌರವವನ್ನು ತರತಕ್ಕ ಚರ್ಚೆ ಅಲ್ಲ. ಯಾರನ್ನೋ ಹಾಸ್ಯಮಾಡಿ ಮಾತನಾಡುವುದು ಸರಿಯಲ್ಲ.

ಆದ್ದರಿಂದ ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಮಾಡಿ. ಇದು ಸದನವೋ ಅಥವಾ ಯಾವುದೋ ಜಾತ್ರೆಯಲ್ಲಿ ಮಾತನಾಡಿದಂತೆ ಮಾತನಾಡುವ ವಿಚಾರ ಇದಲ್ಲ. ಇಷ್ಟು ಲಘುವಾಗಿ ಮಾತನಾಡಬಾರದು. ಯಾವುದೇ ವಿಚಾರವಾಗಲಿ ಇಷ್ಟೊಂದು ಲಘುವಾಗಿ ತೆಗೆದುಕೊಳ್ಳುವುದು ಸರಿಯಲ್ಲ. ಇದು ವಿಧಾನ ಸಭೆಯೋ ಏನು? ನಮಗೂ ತಾಯಿ ಇದ್ದಾರೆ, ಅಕ್ಕ ತಂಗಿಯರಿದ್ದಾರೆ. ಕನ್ನಡಕವನ್ನು ಹಾಕಿಕೊಂಡರೆ **xxx** ಕಾಣುತ್ತದೆ ಎಂದು ಹೇಳುವುದಾದರೆ ಇದು ಏನು?

(ಗೊಂದಲ)

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಸದಸ್ಯರು ಹೇಳಿರುವಂಥ ಮಾತುಗಳು, ಶಬ್ದಗಳು ಏನಿವೆ ಅದನ್ನು ಕಡತದಿಂದ ತೆಗೆಸಿಹಾಕಬೇಕು. ಅದ ಕಡತಕ್ಕೆ ಹೋಗಲೇಬಾರದು. ಕಡತದಲ್ಲಿ ಇರಲೇ ಬಾರದು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಮೆರಿಕಾದಲ್ಲಿ ಕನ್ನಡಕ ಸಿಕ್ಕುತ್ತದೆ ಎಂದು ಅವರು ಹೆಣ್ಣುಮಕ್ಕಳ ಬಗ್ಗೆ ಇಷ್ಟೊಂದು ತಾತ್ಸಾರವಾಗಿ ಮಾತನಾಡುವುದು ಸರಿಯಲ್ಲ.

ಉಪಾಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ ಎಲ್ಲರೂ ಎದ್ದು ನಿಂತುಕೊಂಡರೆ ನಾನು ಹೇಗೆ ಸದನ ನಡೆಸುವುದು? ಹೀಗೆ ಎಲ್ಲರೂ ಎದ್ದುನಿಂತು ಮಾತನಾಡುವುದಾದರೆ ಸದನವನ್ನು ಹೇಗೆ ನಡೆಸಬೇಕು? ಯಾರಿಗೆ ಹೇಳಬೇಕು? ಹಿರಿಯ ಮಾನ್ಯ ಸದಸ್ಯರೂ ಕೂಡ ಸಹಕಾರವನ್ನು ಕೊಡದೇ ಹೋದರೆ ಈ ಸದನವನ್ನು ನಡೆಸುವುದಾರೂ ಹೇಗೆ? ಯಾವುದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರೂ ಎಲ್ಲರೂ ಮಾತನಾಡುತ್ತೇವೆಂದರೆ ಹೇಗೆ? ಎಲ್ಲರಿಗೂ ಹೇಗೆ ಅವಕಾಶವನ್ನು ಕೊಡುವುದು ಹೇಗೆ?

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸಿ. ಮತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಉಪಯೋಗಿಸಿರತಕ್ಕ ಆ ಶಬ್ದಗಳನ್ನು ಕಡತದಿಂದ ತೆಗೆಸಬೇಕು. ಅದು ಕಡತದಲ್ಲಿ ಇರಕೂಡದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕನ್ನಡಕದಲ್ಲಿ ನೋಡಿದರೆ ನಮ್ಮ ಮನಸ್ಸಿಗೆ ಕಾಣುತ್ತದೆ ಎಂದು ಹೇಳಿದ್ದು ಅಗೌರವದ ಮಾತೇ? ಅಗೌರವವಾಗಿ ನಾನು ಹೇಳಿದೆನೇ?

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ನೀವು ಏನು ಮತ್ತೆ ಮಾತನಾಡಿದ್ದೀರಿ ಎಂಬುದನ್ನು ನೋಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಮತ್ತೊಮ್ಮೆ ಹೇಳುತ್ತೇನೆ.

ಉಪಾಧ್ಯಕ್ಷರು : ನೀವು ಮತ್ತೆ ಹೇಳುವುದು ಏನೂ ಬೇಡ. ಸಾಕು.

{**xxx** - ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.}

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಅನಂತನಾಗ್ : ಮಾನ್ಯ ಉಪಾಧ್ಯಕ್ಷರೆ, ಬ್ಯಾಂಡಿಟ್ ಕ್ವೀನ್ ಚಿತ್ರವನ್ನು ನಾನು 2 ಸಲ ನೋಡಿದ್ದೇನೆ. ಮಾನ್ಯ ಪಾಟಾಳ್‌ರವರು ಹೇಳಿದಂತೆ ಅಶ್ಲೀಲ ಯಾವುದು ಅಥವಾ ಚೆನ್ನಾಗಿರುವುದು ಯಾವುದು ಎಂಬುದನ್ನು ಹೇಳುವುದಕ್ಕೆ ಸೆನ್ಸಾರ್ ಬೋರ್ಡ್ ಇದೆ. ಅನೇಕ ಕತ್ತರಿ ಪ್ರಯೋಗವನ್ನು ಮಾಡಿದನಂತರ ಈ ಚಿತ್ರ ಹೊರಗೆ ಬಂದಿದೆ. ಇದರಲ್ಲಿ ಒಂದು ನಗ್ನ ದೃಶ್ಯ ಇದೆ. ಆದರೆ ಅದು ಏನು ತೋರಿಸುತ್ತದೆಂದರೆ, ಉತ್ತರ ಭಾರತದಲ್ಲಿರತಕ್ಕ ಒಂದು ರಾಜ್ಯದಲ್ಲಿ ಯಾವ ಮಟ್ಟದಲ್ಲಿ ಹೆಣ್ಣಿನ ಶೋಷಣೆ ಇದೆ, ಆಕೆ ಯಾವ ಕಾರಣಕ್ಕಾಗಿ ಧಕಾಯಿತಿ ಆಗುತ್ತಾಳೆ ಎಂಬುದನ್ನು ತೋರಿಸಿ, ಒಂದು ಸನ್ನಿವೇಶದಲ್ಲಿ ಅವಳನ್ನು ನಗ್ನಳನ್ನಾಗಿ ಮಾಡಿ ಬಾವಿಗೆ ಹೋಗಿ ನೀರನ್ನು ಸೇದಿಕೊಂಡು ಬಾ ಎಂದು ಹೇಳುತ್ತಾರೆ. ಆದರೆ ನಾನು ಆ ಚಿತ್ರವನ್ನು ನೋಡುವಾಗ ಅದರಲ್ಲಿ ಯಾವುದೇ ರೀತಿಯ ಅಶ್ಲೀಲತೆಯೂ ನನಗೆ ಕಾಣಲಿಲ್ಲ ಮಾತ್ರವಲ್ಲ. ಇಡೀ ಚಿತ್ರಮಂದಿರದಲ್ಲಿ ಆ ಸಂದರ್ಭದಲ್ಲಿ ಒಂದು ರೀತಿಯ ಷಾಕ್ ಮೌನ್, ದುಃಖ ಆವರಿಸುತ್ತದೆ. ಇದು ನಗ್ನ ಸತ್ಯ. ಆ ಕ್ರೌರ್ಯ ಮತ್ತು ಶೋಷಣೆಯ ಬಗ್ಗೆ ಆ ಚಿತ್ರವನ್ನು ತೆಗೆದಿಯೇ ಹೊರತು, ಬೇರೆ ಅಲ್ಲ. ಅದರಲ್ಲಿ ಕೆಲವು ಕೆಟ್ಟ ಬೈಗಳಗಳೆಲ್ಲಾ ಇವೆ. ಆದರೆ ಅವು ಯಾವುವು ಕೂಡ ಹಿಂದಿ ಭಾಷೆಯನ್ನು ತಿಳಿದವರಿಗೂ ಅರ್ಥ ಆಗುವುದಿಲ್ಲ. ಅಂಥ ಒಂದು ಗ್ರಾಮ್ಯ ಭಾಷೆ. ಆ ಚಿತ್ರದ ಮೇಲೆ ಅನೇಕ ಸಂದರ್ಭದಲ್ಲಿ ಕತ್ತರಿ ಪ್ರಯೋಗ ನಡೆದು, ಅಲ್ಲಿ ಈ ಚಿತ್ರ ಅನೇಕ ಸಂಕಷ್ಟಗಳನ್ನು ಎದುರಿಸಿ ಬಂದಿದ್ದರೂ ಇವತ್ತು ಜನರು ಆ ಚಿತ್ರಕ್ಕೆ ಹೋಗುತ್ತಿದ್ದಾರೆ. ಆದರೆ ಆ ದೃಶ್ಯಕ್ಕೆ ಅಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ದಯವಿಟ್ಟು ಸರ್ಕಾರದವರು ಈ ಚಿತ್ರವನ್ನು ನಿಲ್ಲಿಸುವುದಕ್ಕೆ ಹೋಗಬಾರದೆಂದು ನನ್ನ ಅಭಿಪ್ರಾಯವನ್ನು ತಿಳಿಸಬಯಸುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಚಿತ್ರದ ಬಗ್ಗೆ ಆಗಲಿ, ನಿರ್ಮಾಪಕರ ಬಗ್ಗೆ ಆಗಲಿ, ಅಥವಾ ಅದು ಓದುವಂಥ ಪ್ರಶ್ನೆಗಿಂತ ಹೆಚ್ಚಾಗಿ ಮಹಿಳೆಯರ ಮೇಲೆ ಆಗುವಂಥ ಕ್ರೌರ್ಯತೆಯ ವಿಚಾರ ಬಂದಾಗ ಈ ಮನೆಯಲ್ಲಿ ಯಾರೂ ಕೂಡ ಬಹಳ ಲಘುವಾಗಿ ತೆಗೆದುಕೊಳ್ಳಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲಿ ಬಂದಿರತಕ್ಕ ಪ್ರಶ್ನೆ ಎಂದರೆ ಒಬ್ಬ ಹೆಣ್ಣುಮಗಳನ್ನು ಅದು ಕ್ರೌರ್ಯ ಇರಬಹುದು, ನಗ್ನತೆ ಇರಬಹುದು, ಅಥವಾ ಅಶ್ಲೀಲತೆ ಇರಬಹುದು ಆಕೆಯನ್ನು ಯಾವ ದೃಷ್ಟಿಯಿಂದ ನೋಡಿಕೊಂಡು ಚಿತ್ರವನ್ನು ತೆಗೆಯುತ್ತಾರೆ ಎಂಬುದನ್ನು ನೋಡಬೇಕೇ ಹೊರತು, ಚಿತ್ರ ಓಡಿತೋ, ಇಲ್ಲವೋ, ಚಿತ್ರದಲ್ಲಿ ಯಾವರೀತಿ ಇದೆ ಎಂಬ ಬಗ್ಗೆ ಚರ್ಚೆಮಾಡುವುದಲ್ಲ. ಯಾವಾಗಲೂ ಹೆಣ್ಣುಮಗಳು ಇಂಥ ಕ್ರೌರ್ಯಕ್ಕೆ ಗುರಿಯಾಗುತ್ತಿದ್ದಾಳೆ, ನಮ್ಮ ಸಂಸ್ಕೃತಿಯಲ್ಲಿ ಇದು ಆಗಬಾರದೆಂಬುದನ್ನು ಇವತ್ತು ಶ್ರೀಮತಿ ಪ್ರಮೀಳಾರವರು ಏನು ಹೇಳಿದ್ದಾರೆ ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಯಾವುದೇ ಹೆಣ್ಣುಮಗಳು ವಿಷಯಬಂದಾಗ ಹೆಣ್ಣುಮಕ್ಕಳಿಗೆ ಸಂಬಂಧಪಟ್ಟ ವಿಷಯ ಬಂದಾಗ ನನಗೆ ಅರ್ಥವಾಗುವುದಿಲ್ಲ. ಈ ಮನೆಯಲ್ಲಿ ಯಾವಾಗಲೂ ಗಲಭೆಯಾಗುವುದು ಸ್ವಾಭಾವಿಕವಾಗಿದೆ. ದಯವಿಟ್ಟು ಇದು ಆಗಬಾರದು. ಇದರ ಬಗ್ಗೆ ಗಂಭೀರವಾಗಿ ಚರ್ಚೆ ಆಗಬೇಕು.

ಇದು ಕೇವಲ ಹೆಣ್ಣುಮಕ್ಕಳಿಗ ಮಾತ್ರ ಸಂಬಂಧಪಟ್ಟದು ಅಥವಾ ಪ್ರಮೀಳಾ ಅವರಿಗಾಗಲಿ, ನಮಗಾಗಲಿ ಅಥವಾ ಶಾಸಕರಿಗೆ ಆಗಲಿ ಸಂಬಂಧಪ್ಪಟದ್ದು ಎಂದು ಅರ್ಥಮಾಡಿಕೊಳ್ಳಬಾರದು. ನಮ್ಮ ಕರ್ನಾಟಕದಲ್ಲಿ ಇಂಥ ಉಚ್ಚವಾದ ಮನೆಯಲ್ಲಿ ಶ್ರೇಷ್ಠವಾದ ಮನೆಯಲ್ಲಿ ಹೆಣ್ಣುಮಕ್ಕಳ ಬಗ್ಗೆ ಪ್ರಶ್ನೆಗಳು ಬಂದಾಗ ಅವರಿಗೆ ಆಗತಕ್ಕ ಅನ್ಯಾಯಗಳ ಬಗ್ಗೆ ಪ್ರಶ್ನೆ ಬಂದಾಗ ತಾವು ದೊಡ್ಡ ಮನಸ್ಸು ಮಾಡಿ ಅದರ ಬಗ್ಗೆ ಪರಿಹಾರ ಕಂಡು ಹಿಡಿಯತಕ್ಕ ದೃಷ್ಟಿಯಲ್ಲಿ ಉನ್ನತ ಮಟ್ಟದ ಚರ್ಚೆ ಆಗಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇದು ಬಹಳ ಮುಖ್ಯ.

ಉಪಾಧ್ಯಕ್ಷರು : ಇದು ಬರೀ ಹೆಣ್ಣು ಮಕ್ಕಳ ಪ್ರಶ್ನೆ ಅಲ್ಲ, ಇಡೀ ಸಮಾಜದ ಪ್ರಶ್ನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೆಣ್ಣುಮಕ್ಕಳಿಗೆ ಅವಮಾನವಾಗತಕ್ಕ ಪ್ರಶ್ನೆ. ಈ ಸದನದಲ್ಲಿ ಅದು ನಡೆಯುವುದಿಲ್ಲ, ನಡೆಯುವುದಕ್ಕೆ ಬಿಡುವುದಿಲ್ಲ. ಇಲ್ಲ ಪ್ರಶ್ನೆ ಇರತಕ್ಕದ್ದು.....

ಉಪಾಧ್ಯಕ್ಷರು : ಕುಳಿತುಕೊಳ್ಳಿ, ಹೀಗೆ ಎಲ್ಲರೂ ಹೇಳುತ್ತಾ ಹೋದರೆ ಹೇಗೆ?

ಶ್ರೀ ಎಂ.ಸಿ. ನಾಣಯ್ಯ : ಬಹಳ ಗಂಭೀರವಾಗಿರತಕ್ಕ ವಿಚಾರವನ್ನು ಸಹೋದರಿ ಪ್ರಮೀಳಾ ನೇಸರ್ಗಿಯವರು ಎತ್ತಿ ಸ್ವಲ್ಪಮಟ್ಟಿಗೆ ಒಂದು ರೊಮ್ಯಾಂಟಿಕ್ ಡಿಸ್ಕಷನ್ ಆಯಿತು ಎಂದು ಹೇಳುತ್ತಿರತಕ್ಕ ಮಟ್ಟಿಗೆ ಹೋಗಿ ಕಡೆಗೆ ಮಾನ್ಯ ಮಿತ್ರರಾದ ಶ್ರೀ ಅನಂತನಾಗ್ ಅವರು ಅದರ ಬಗ್ಗೆ ಬೆಳಕನ್ನು ಚೆಲ್ಲುವುದರ ಮೂಲಕ ಅದರಲ್ಲಿ ಏನಿದೆ ಎಂದು ಹೇಳತಕ್ಕದ್ದನ್ನು ನಾನು ಕೇಳಿದೆ. ಬ್ಯಾಂಡಿಟ್ ಕ್ವೀನ್ ಎಂದು ಹೇಳತಕ್ಕ ಚಿತ್ರ ನಿರ್ಮಾಣ ಮಾಡಿ ಆಮೇಲೆ ಬಹಳಷ್ಟು ಇದರ ಬಗ್ಗೆ ವ್ಯಾಖ್ಯಾನಗಳು ಎಲ್ಲಾಪತ್ರಿಕೆಗಳಲ್ಲಿ ಬಂದಿರತಕ್ಕದ್ದನ್ನು ನಾನು ಓದಿದ್ದೇನೆ. ಕ್ರಿಟಿಸಿಸಂ ಫಾರ್ ಅಂಡ್ ಎಗೆನೆಸ್ಟ ಬಂದಿರತಕ್ಕದ್ದನ್ನು ನಾನು ನೋಡಿದ್ದೇನೆ. ಕಡೆಗೆ ಇದರ ಬಗ್ಗೆ ಪೂಲನ್ ದೇವಿ ಅವರೇ ಈ ಒಂದು ಚಿತ್ರವನ್ನು ನಿರ್ಮಾಣ ಮಾಡಿದ್ದರಲ್ಲಿ ನನ್ನನ್ನು ಅವಹೇಳನ ಮಾಡಿದ್ದಾರೆಂದು ಹೇಳುವ ಮಟ್ಟಕ್ಕೆ ಬಂದು ಕೋರ್ಟಿಗೆ ಹೋಗತಕ್ಕ ಪ್ರಸಂಗ ಬಂದು ಕಡೆಗೆ ಕೋರ್ಟಿನಲ್ಲಿ ತೀರ್ಮಾನವಾಗಿರತಕ್ಕದ್ದು. ಕಡೆಗೆ ಹಲವಾರು ಬೇರೆ ಬೇರೆ ಭಾಗದಲ್ಲಿ ಇದರ ಬಗ್ಗೆ ಚರ್ಚೆಯಾಗಿ ಕೊನೆಗೆ ಯಾವುದನ್ನು ತೆಗೆಯಬೇಕು, ಯಾವುದನ್ನು ತೆಗೆಯಬಾರದು ಎಂದು ಹೇಳತಕ್ಕದ್ದನ್ನು ತೀರ್ಮಾನ ಮಾಡಿ ತೆಗೆಯಬೇಕಾದುದನ್ನು ಕಡೆಗೆ ತೆಗೆದು ಸೆನ್ಸಾರ್ ಮಂಡಳಿ ಅದಕ್ಕೆ ಸಂಪೂರ್ಣವಾಗಿ ಅನುಮತಿ ಕೊಟ್ಟು ಅದು ಬಂದಿದೆ. ಅದರ ರೆವ್ಯೂವನ್ನು ಓದಿರತಕ್ಕ ಹಿನ್ನೆಲೆಯಲ್ಲಿ ನಿರ್ಮಾಪ ಮತ್ತು ನಿರ್ದೇಶಕ ಅವರ ಮನಸ್ಸಿನಲ್ಲಿದ್ದ ಚಿಂತನೆ ಯಾವುದು ಎಂಬುದನ್ನು ನಾವು ತಿಳಿದುಕೊಳ್ಳಬೇಕು ಪ್ರಮೀಳಾ ನೇಸರ್ಗಿಯವರೇ ಈ ಒಂದು ಚಿತ್ರ ಬಂದಿರತಕ್ಕದ್ದು ಮಹಿಳೆಯನ್ನು ಅವಮಾನ ಮಾಡಬೇಕೆಂದು ಹೇಳಬೇಕೆಂಬ ದೃಷ್ಟಿಯಿಂದ ತಂದಿರತಕ್ಕ ಚಿತ್ರ ಅಲ್ಲ. ಅಪಮಾನಕ್ಕೆ ಒಳಪಟ್ಟಿರತಕ್ಕ ಒಬ್ಬ ಮಹಿಳೆ ಶೋಷಣೆಗೆ ಒಳಪಟ್ಟಿರತಕ್ಕ ಒಬ್ಬ ಮಹಿಳೆ, ಒಂದು ಸಮಾಜದಲ್ಲಿ ಒಬ್ಬ ಮಹಿಳೆ ಅವಳು ಶೋಷಣೆಗೆ ಒಳಪಟ್ಟ ಮೇಲೆ ಮನನೊಂದು ಕಡೆಗೆ ಚಂಡಿಯಾಗಿ ಹೊರಬಂದ ಮೇಲೆ ಯಾವ ರೀತಿ ತನ್ನ ಪ್ರದರ್ಶನ ಮಾಡಿದಳು ಎಂದು ಹೇಳತಕ್ಕದ್ದನ್ನು ಆ ಚಿತ್ರ ನೋಡಿದರೆ ಗೊತ್ತಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಂದರೆ ನಗ್ನತೆಯನ್ನು ಒಪ್ಪಿಕೊಂಡು ಬಿಟ್ಟಿರಿ, ಅದನ್ನು ತೋರಿಸಬಹುದೆಂಬುದು ತಮ್ಮ ಅಭಿಪ್ರಾಯ. ನಗ್ನತೆಯನ್ನು ತೋರಿಸಿ ಇಡೀ ಮಹಿಳಾ ಸಮುದಾಯಕ್ಕೆ ಈ ಚಿತ್ರದಿಂದ ಅವಮಾನವಾಗಿದೆ. ತಾವು ತಮ್ಮ ಅಭಿಪ್ರಾಯ ಸರಿಯೇ ಎಂಬುದನ್ನು ಯೋಚನೆ ಮಾಡಿ ನೋಡಿ.

SRI M.C. NANAIAH : I will come to that. Kindly hear me. I am not going to justify the action now. Kindly have a lokk at the film. Sir, I have read the several reviews about it. ಆದರಲ್ಲಿ ಏನು ಮಾಡಿದ್ದಾರೆಂದರೆ, ಹೆಣ್ಣುಮಕ್ಕಳು ಏತಕ್ಕೋಸ್ಕರ ಈ ಪರಿಸ್ಥಿತಿಗೆ ಒಳಗಾದಳು ಮತ್ತು ಅವೆಲ್ಲವನ್ನು ದಾಟಿ ಅವರು ಡಕಾಯಿತಿ ಆದಳು ಎಂದು ಹೇಳತಕ್ಕ ಒಂದು ಸೀಕ್ವೆನ್ಸ್ ಆಫ್ ಈ ಪಾಯಿಂಟ್ಸ್ ತಂದು ಸಮಾಜದಲ್ಲಿ ಶೋಷಣೆಗೆ ಒಳಪಟ್ಟಿರತಕ್ಕ ಬಗ್ಗೆ ಸಮಾಜದ ಮೇಲೆ ಪರಿಣಾಮಕಾರಿಯಾಗತಕ್ಕ ಚಿತ್ರ ಲೇಪನವನ್ನು ಅವರು ತಂದಿದ್ದಾರೆ. ಇಂಥ ಹಿನ್ನೆಲೆಯಲ್ಲಿ ನಾನು ಹೇಳತಕ್ಕದ್ದು ಇವತ್ತು ಸೆನ್ಸಾರ್ ಬೋರ್ಡ್‌ನಿಂದ ಸಂಪೂರ್ಣವಾಗಿ ಅದಕ್ಕೆ ಬೇಕಾದಷ್ಟು ಕತ್ತರಿಗಳ ಪ್ರಯೋಗ ಮಾಡಿ ಇವತ್ತು ಅದನ್ನು ಪ್ರದರ್ಶನಕ್ಕೆ ತಂದಿದ್ದಾರೆ. ನೀವು ಹೇಳುತ್ತಿದ್ದೀರಿ, ಇದರಲ್ಲಿ ಮಹಿಳೆಯನ್ನು ಅಪಮಾನಕ್ಕೆ ಒಳಪಡಿಸತಕ್ಕದ್ದನ್ನೇ ನಾವು ನೋಡುತ್ತಿರತಕ್ಕದ್ದು ಒಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ದಯವಿಟ್ಟು ಕೇಳಿ, ನೀವು ಸಿನೆಮಾ ರಂಗದಲ್ಲಿ ನಾಟಕ ರಂಗದಲ್ಲಿ ಪಾತ್ರ ಮಾಡಿದ್ದು ಗೊತ್ತಿದೆ. ನೀವು ಡ್ಯಾನ್ಸ್ ಮಾಡಿದ್ದನ್ನು ನಾನು ನೋಡಿದ್ದೇನೆ, ಇಲ್ಲವೆಂದು ಅಲ್ಲ.

ಶ್ರೀ ಎಂ. ಸಿ. ನಾಣಯ್ಯ : ಡ್ಯಾನ್ಸ್ ಮಾಡಿದ್ದೇ ತಪ್ಪಾಯಿತಲ್ಲಾ. ಡ್ಯಾನ್ಸ್ ಮಾಡುವುದು ಹೆಣ್ಣುಮಕ್ಕಳಿಗೆ ಮಾತ್ರ ಅಧಿಕಾರವೇ? ನಾನು ನಿಮಗಿಂತ ಚೆನ್ನಾಗಿ ಡ್ಯಾನ್ಸ್ ಮಾಡುತ್ತೇನೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಿನೇಮಾದಲ್ಲಿ ನಗ್ನತೆಯನ್ನು ತೋರಿಸಬೇಕಾದರೆ ಬಾಯಿ ಮಾತಿನಲ್ಲಿ ಹೇಳುತ್ತಾರೆ; ಈ ಹೆಣ್ಣುಮಕ್ಕಳನ್ನು ನಗ್ನವಾಗಿ ಕಳುಹಿಸಿದರೆ ಎಂದು ಇನ್ನೊಬ್ಬರ ಬಾಯಿ ಮಾತಿನಲ್ಲಿ ಹೇಳುತ್ತಾರೆ. ಆದರೆ ಇಡೀ ನಗ್ನತೆಯನ್ನು ಯಾರೂ ಪ್ರದರ್ಶನ ಮಾಡುವುದಿಲ್ಲ. ಸಿನೇಮಾ ರಂಗದಲ್ಲಾಗಲಿ ಅಥವಾ ನಾಟಕ ರಂಗದಲ್ಲಾಗಲಿ ಯಾರನ್ನೂ ಕೂಡ ನಗ್ನವಾಗಿ ತೋರಿಸುವುದಿಲ್ಲ. ಈ ಚಿತ್ರದಲ್ಲಿ ನಗ್ನ ಮಹಿಳೆಯನ್ನು ತೋರಿಸಿರತಕ್ಕದ್ದು ನಿಮ್ಮ ಮನಸ್ಸಿಗೆ ಒಪ್ಪುತ್ತದೆಯೇ? ನಿಮ್ಮ ಮಗಳು ಆಗಿದ್ದರೆ ನೀವು ಒಪ್ಪುತ್ತೀದ್ದಿರಾ? ನಿಮ್ಮ ಹೆಂಡತಿ ಆಗಿದ್ದರೆ ಒಪ್ಪುತ್ತಿದ್ದೀರಾ? ಯೋಚನೆ ಮಾಡಿ ನೋಡಿ. ಅಮಿತಾ ಬಚನ್ ಜೊತೆ ನೀವು ಷಾಮೀಲಾಗಿದ್ದರೆಂದು ನಾವು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಎಂ. ಸಿ. ನಾಣಯ್ಯ : ಬಹುಶಃ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಈ ಕರ್ನಾಟಕ ರಾಜ್ಯದಲ್ಲಿರತಕ್ಕ ಮಹಿಳೆಯರ ಸಂಪೂರ್ಣ ಗುತ್ತಿಗೆಯನ್ನು ನಾನು ಪಡೆದುಕೊಂಡಿದ್ದೇನೆಂದು ಹೇಳತಕ್ಕ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಆದರ ಜೊತೆಯಲ್ಲಿ ನನ್ನ ಶ್ರೀಮತಿಯವರ ಗುತ್ತಿಗೆಯನ್ನು ಇವರೇ ತೆಗೆದೆಕೊಂಡ ಹಾಗೆ ಕಾಣುತ್ತದೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಹಿಳೆಯರ ಬಗ್ಗೆ ಅಭಿಮಾನ್ ಇರತಕ್ಕ ಸದಸ್ಯರು ಇದ್ದಾರೆಂದು ತಿಳಿದುಕೊಳ್ಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಸ್ವಲ್ಪ ನಾಲಿಗೆ ಬಿಗಿ ಹಿಡಿದು ಮಾತನಾಡಿ.

ಶ್ರೀ ಎಂ. ಸಿ. ನಾಣಯ್ಯ : ನನಗೆ ನಾಲಿಗೆ ಬಿಗಿ ಹಿಡಿಯುವುದಕ್ಕೆ ಹೇಳಬೇಡಿ, ನೀವೇ ಹಿಡಿದುಕೊಳ್ಳಿರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ಮಹಿಳಾ ಸಮಾಜಕ್ಕೆ ಅವಮಾನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನಾನು ಈಲ್ಡ ಆಗಿಲ್ಲ.

ಉಪಾಧ್ಯಕ್ಷರು : ಕುಳಿತುಕೊಳ್ಳಿರಿ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನಾನು ಅಲ್ಲ ಆಗೌರವ ತರುವುದು. ನಿಮ್ಮ ಇತಿಹಾಸ ಎಲ್ಲಾ ಹೇಳಬೇಕಾಗುತ್ತದೆ.

(ಕೋಲಾಹಲ)

ಉಪಾಧ್ಯಕ್ಷರು : ಕುಳಿತುಕೊಳ್ಳಿರಿ. ಕರೆದವರದ್ದು ಮುಗಿಯಲಿ. ಶ್ರೀರಾಮರೆಡ್ಡಿಯವರೇ, ಕುಳಿತುಕೊಳ್ಳಿ

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಅವರದ್ದು ವಿಪರೀತ ಆಯಿತು. ಸಚಿವರ ಹೆಂಡತಿ ಬಗ್ಗೆ ಮಾತನಾಡುವುದಕ್ಕೆ ಯಾರು ಅವರಿಗೆ ಅಧಿಕಾರ ಕೊಟ್ಟರು?

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಬೇರೆಯವರೆಲ್ಲಾ ನಿಂತಿದ್ದಾರೆ. ಅವರು ಕೂರುತ್ತಿಲ್ಲ, ನನಗೆ ಮಾತ್ರ ಕುಳಿತುಕೊಳ್ಳಿ ಎಂದು ಹೇಳುತ್ತೀರಲ್ಲಾ? ನಮ್ಮ ಹಿತವನ್ನು ಕಾಪಾಡಿ ಸುಸ್ತಾಗಿ ಹೋದಿರಾ?

ಶ್ರೀ ಎಂ.ಸಿ. ನಾಣಯ್ಯ : ಎಲ್ಲಾ ನೋಡಿ. ಈ ತರಹ ಒತ್ತಡ ಉದ್ವೇಗ ಇಷ್ಟೆಲ್ಲಾ ಆಗಿರತಕ್ಕದ್ದಕ್ಕೆ ಕಾರಣ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಎತ್ತಿರತಕ್ಕ ಈ ಒಂದು ಗಂಭೀರವಾಗಿರತಕ್ಕ ವಿಚಾರ. ಬಹಳ ಹಳೆಯ ಕಾಲದಿಂದ ಏನು ಹೇಳುತ್ತಾರೆಂದರೆ ನೀರಿನಲ್ಲಿ ಇರತಕ್ಕ ಮೀನಿನ ಹೆಜ್ಜೆಯನ್ನಾದರೂ ಹುಡುಕಬಹುದು, ಹತ್ತಿಯ ಮರದ ಹೂವನ್ನಾದರೂ ಕಾಣಬಹುದು, ಓ ಹೆಣ್ಣೆ ನಿನ್ನ ಮಾಯೆಯನ್ನುಮಾತ್ರ ನೋಡುವುದಕ್ಕಾಗುವುದಿಲ್ಲ, ಕಾಣುವುದಕ್ಕಾಗುವುದಿಲ್ಲ ಎಂದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಾಯೆ ಎಂಬರು; ಆದುದರಿಂದ ಹೆಣ್ಣು ಎಂಬುದು ನಿಮಗೆ ಒಬ್ಬರಿಗೆ ಗುತ್ತಿಗೆಯೆ? ನಮಗೂ ಪಾಲು ಇದೆ. ನಮ್ಮತಾಯಿಂದಿರ ಬಗ್ಗೆ ನಿಮಗೆ ಮಾತ್ರ ಅಲ್ಲ, ನಮಗೆ ಕೂಡ ಗೌರವ ಇದೆ.

ಶ್ರೀ ಎಂ. ಪಿ. ಪ್ರಕಾಶ್ : "ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ! ಮಣ್ಣುಮಾಯೆ ಎಂಬರು ಮಣ್ಣು ಮಾಯೆಯಲ್ಲ! ಮನದ ಮುಂದಣ ಆಸೆಯೇ ಮಾಯೆ" ಎಂದು ಹೇಳಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಶ್ರೀಮತಿ ಪ್ರಮೀಳಾ ನೇಸರ್ಗಿ ಯವರಿಗೆ ಹೇಳುತ್ತೇನೆ ಮಹಿಳೆಯರಿಗೆ ಸಂಬಂಧಪಟ್ಟ ವಿಚಾರ ಬಂದಾಗ ಮಾನ್ಯ ಅಧ್ಯಕ್ಷರೆ ಅವರಿಗಿಂತ ಹೆಚ್ಚು ಅಲ್ಲದಿದ್ದರೂ ಅವರಷ್ಟೇ ಕಳಕಳಿ ನಮ್ಮಲ್ಲೂ ಇದೆ. ತಾವು ಒಂದು ಮಾತನ್ನು ಆಡಿದಿರಿ. ನಿಮ್ಮ ಶ್ರೀಮತಿಯವರನ್ನು ನಗ್ನಪ್ರದರ್ಶನ ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ, ನಿಮ್ಮ ಮಗಳನ್ನು ನಗ್ನಪ್ರದರ್ಶನ ಮಾಡುತ್ತಾ ಇರತಕ್ಕ ಸಂದರ್ಭದಲ್ಲಿ ಎನ್ನತಕ್ಕ ಮಾತನ್ನು ಆಡಿದಿರಿ. ಆ ಪದಗಳನ್ನು ಇಲ್ಲಿ ಬಳಸುತ್ತಾ ಇರತಕ್ಕದ್ದು ಎಷ್ಟರಮಟ್ಟಿಗೆ ಸರಿಯೋ ತಪ್ಪೋ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಚರ್ಚೆಯಲ್ಲಿ ಎಲ್ಲವೂ ಕೂಡ ಬಂದಿದೆ. ಆದರೆ ನಾನು ಕೇಳಿರತಕ್ಕದ್ದೇನೆಂದರೆ ಬಹುಶಃ ಆ ಚಿತ್ರದ ಒಟ್ಟಾರೆ ಅರ್ಥವನ್ನು ನೋಡಿದಾಗ ಸಮಾಜದಲ್ಲಿ ಶೋಷಣೆಗೆ ಒಳಪಟ್ಟಿರತಕ್ಕ ಒಂದು ಹೆಣ್ಣುಮಗಳು ಕಡೆಗೆ ಯಾವ ರೀತಿಯಲ್ಲಿ ಒಂದು ವೃತ್ತಿಯನ್ನು ಅವಲಂಬಿಸಿಬೇಕಾಗಿ ಬಂದು ಎಂದು ಹೇಳುತ್ತಾ ಇರತಕ್ಕದ್ದನ್ನು ಸಮಾಜದ ಮೇಲೆ ಪರಿಣಾಮವನ್ನು ಬೀರಲಿಕ್ಕೆ ಇರತಕ್ಕಂಥದ್ದು ಇದು ನಡೆಯಕೂಡದು ಎನ್ನುವ ವಿಚಾರಧಾರೆ ಈ ಚಿತ್ರದಲ್ಲಿ ಪ್ರತಿಪಾದಿಸಿದ್ದಾರೆ. ಆ ಚಿತ್ರದಲ್ಲಿ ಪ್ರತಿಪಾದಿಸಿರತಕ್ಕದ್ದು ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರಲಿಕ್ಕೆ ಇರತಕ್ಕ ಕಥಾವಸ್ತು ಅಲ್ಲ. ಶೋಷಣೆಗೆ ಒಳಪಟ್ಟವರನ್ನು ಶೋಷಣೆಗೆ ಒಳಪಡಿಸಕೂಡದು ಎಂದು ಹೇಳುತ್ತಾ ಇರತಕ್ಕಂಥ ಆ ಒಂದು ಉತ್ತಮವಾಗಿರತಕ್ಕ ಚಿತ್ರದಲ್ಲಿ ಕಥೆ ಇದೆ; ವಸ್ತುನಿರೂಪಣೆ ಇದೆ ಎನ್ನುವ ಬಗ್ಗೆ ಬೇಕಾದಷ್ಟು ವ್ಯಾಖ್ಯಾನವನ್ನು ಮತ್ತು ಅದರ ಬಗ್ಗೆ ಕ್ರಿಟಿಸಿಸಂ ಬಂದಿರುವುದನ್ನು ನಾನು ನೋಡಿದ್ದೇನೆ. ಆದ್ದರಿಂದ ಮಾನ್ಯ ಸಭ್ಯಾಧ್ಯಕ್ಷರೆ, ಬಹುಶಃ ಅವರು ಎತ್ತಿರತಕ್ಕ ವಿಚಾರ ಯಾವುದಿದೆ ನಾವೆಲ್ಲರೂ ಒಂದು ಸಾರಿ ನೋಡೋಣ. ನೋಡಬೇಕಾದ್ದೆ. ನಾನಂತೂ ಆ ಚಿತ್ರವನ್ನು ನೋಡಿಲ್ಲ. ಆ ಚಿತ್ರವನ್ನು ನೋಡಬೇಕಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಗಮನವನ್ನು ಹರಿಸಿದ್ದೀರಿ. ಸರ್ಕಾರ ಇದನ್ನು ಆ ದಿಕ್ಕಿನಲ್ಲಿ ನಾವು ನೋಡುತ್ತೇವೆ. ಅದರ ಜೊತೆ ಇನ್ನೂ ಒಂದು ಹೇಳುತ್ತಿದ್ದೇನೆ. ಅವರು ಒಂದು ಹೇಳಿದರು. 'ರತಿ ವಿಜ್ಞಾನ' ಎಂದು ಹೇಳಿದರು. ನಾವು ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನಾವು ಕೊಡುತ್ತಾ ಇರತಕ್ಕಂಥ ಸಹಾಯಧನ, ನಾವು ಕೊಡುತ್ತಾ ಇರತಕ್ಕ ಟ್ಯಾಕ್ಸ್ ಕನಸೆಷನ್ ಯಾವುದಿದೆ ಇದು ಯಾವುದೇ ಕ್ರೌರ್ಯಕ್ಕೆ ಒಳಪಟ್ಟಿರತಕ್ಕ, ಹಿಂಸೆಗೆ ಒಳಪಟ್ಟಿರತಕ್ಕ, ಮತ್ತು ಅಶ್ಲೀಲತೆಗೆ ಒಳಪಟ್ಟಿರತಕ್ಕ ಅಥವಾ ಯಾವುದೇ ಒಂದು ಕಥಾವಸ್ತು ಲೈಂಗಿಕ ಪ್ರಚೋದನೆಯನ್ನು ಮಾಡುತ್ತಾ ಇರತಕ್ಕ ಯಾವುದೇ ಚಿತ್ರಗಳು ಬಂದರೂ ಅಂಥ ಚಿತ್ರಗಳಿಗೆ ಸಬ್ಸಿಡಿಯಾಗಲೀ ಟ್ಯಾಕ್ಸ್ ಕನಸೆಷನ್ ಆಗಲೇ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ. ಇದು ಅವರ ಅಭಿಪ್ರಾಯ. ಇದರ ಬಗ್ಗೆ ಚರ್ಚೆಯಾಗಬೇಕು. ಸರಿಯಲ್ಲ ಇದು. ಕನ್ನಡಚಿತ್ರಗಳ ಬೆಳವಣಿಗೆಗೆ ಒಂದು ನೀತಿ ಇದೆ. ಆ ನೀತಿಯಲ್ಲಿ ಇದು ಯಾವುದೂ ಇಲ್ಲ. ಹೀಗೆ ಇರಬೇಕು ಚಿತ್ರ, ಇದೇ ತರಹ ತೆಗೆಯಬೇಕು ಅಂತ ಯಾವುದೂ ಇಲ್ಲ. ಈಗ ಏನಾಗಿದೆ? ಈಗ ಇರತಕ್ಕಂಥ ಚಿತ್ರಗಳಿಗೆ ಏಳು ಕೋಟಿ ರೂಪಾಯಿ ಸಾಲ ಕೊಡುವುದಕ್ಕಾಗಿಲ್ಲ ಇವರ ಕೈಯಲ್ಲಿ.

ಶ್ರೀ ಎಂ. ಸಿ. ನಾಣಯ್ಯ : ಸಭಾಧ್ಯಕ್ಷರೆ, ನಾನು ಹೇಳಿಬಿಡುತ್ತೇನೆ.

ಉಪಾಧ್ಯಕ್ಷರು : ಅವರು ಮುಗಿಸಲಿ ಇರಿ ವಾಟಾಳ್ ಅವರೇ.

ಶ್ರೀವಾಟಾಳ್ ನಾಗರಾಜ್ : ಇದು ಒಂದು ಕುಂಟುನೆಪ. ಇದು ಒಳ್ಳೆಯದಲ್ಲ. ನಾನು ನಿಮಗೆ ಹೇಳುತ್ತಾ ಇದ್ದೇನೆ ಕನ್ನಡ ಚಿತ್ರೋದ್ಯಮ ನೆಲ ಕಚ್ಚುತ್ತದೆ. ಕನ್ನಡ ಚಿತ್ರೋದ್ಯಮ ಬೀದಿಪಾಲಾಗುತ್ತದೆ ಎನ್ನುವಂಥ ಮಾತನ್ನು ನಾನು ಹೇಳುತ್ತಾ ಇದ್ದೇನೆ. ನಾನು ಹೇಳುತ್ತೇನೆ, ಇದಕ್ಕೆ ಬೆರೆಸಬೇಡಿ. ಈ ವಿಚಾರವೇ ಬೇರೆ. ಅದನ್ನು ಚರ್ಚೆ ಮಾಡೋಣ ನಾವು. ಅಶ್ಲೀಲ ಯಾವುದು ಎಂಬುದನ್ನು ಯಾರು ಸ್ವಾಮಿ ಕಂಡುಹಿಡಿಯುವವರು? ಇದಕ್ಕೇನು ಸಮಿತಿ ಮಾಡುತ್ತೀರಿ?

ಶ್ರೀ ಎಂ. ಸಿ. ನಾಣಯ್ಯ : ನಾನು ಹೇಳುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಸ್ವಾಮಿ, ಯಾವುದೇ ಒಂದು ಚಿತ್ರ ಪ್ರಧಾನವಾಗಿ ಬಹುಶಃ ಅದಕ್ಕೋಸ್ಕರವಾಗಿ ಚಿತ್ರೀಕರಣ ಮಾಡಿರತಕ್ಕ ಚಿತ್ರಗಳೂ ಬೇಕಾದಷ್ಟಿವೆ. ಮಾನ್ಯ ಮೊಯಿಲಿಯವರಿಗೆ ಗೊತ್ತಿದೆ, ಯಾವ ಯಾವ ಚಿತ್ರಗಳು ಬಂದಿವೆ ಅಂತ. ಅದನ್ನೇ ಕಥಾವಸ್ತುವಾಗಿ ಮಾಡಿಕೊಂಡಿದ್ದಾರೆ. ಆ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ನಾಣಯ್ಯನವರ ಬಗ್ಗೆ ಗೌರವ ಇದೆ. ಸೆನ್ಸಾರ್ ಮಂಡಳಿ ಒಂದಿದೆ ನಮ್ಮಲ್ಲಿ. ಅದನ್ನು ಎಲ್ಲರೂ ಮರೆಯುತ್ತಾ ಇದ್ದೀರಿ. ನಿಮ್ಮದೇ ಆದಂಥ ಹೊಸ ಸೆನ್ಸಾರ್ ಮಂಡಳಿ ಮಾಡುವುದಕ್ಕಾಗುವುದಿಲ್ಲ. ಕನ್ನಡ ಚಿತ್ರಗಳಿಗೆ ಮಾರಕ ನೀವು ತೆಗೆದುಕೊಳ್ಳತಕ್ಕ ನಿಲುವು. ಯಾವ ಸರ್ಕಾರವೂ ನಿಮ್ಮ ತರಹ ನಿಲುವನ್ನು ತೆಗೆದುಕೊಂಡಿರಲಿಲ್ಲ. ಆದ್ದರಿಂದ ದಯಮಾಡಿ ತಮಗೆ ಹೇಳುತ್ತಿದ್ದೇನೆ ನಾಣಯ್ಯನವರೇ ಇದನ್ನು ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಮತ್ತೊಮ್ಮೆ ಒಂದಲ್ಲ ನಾಲ್ಕು ಸಾರಿ ಪರ್ಯಾಲೋಚಿಸಿ. ಮತ್ತು ಚಿತ್ರರಂಗದ ಎಲ್ಲರ ಜೊತೆ ಕರೆದು ಮಾತನಾಡಿ. ಇದು ಸರ್ಕಾರದ ನೀತಿಗೆ ವಿರುದ್ಧವಾದಂಥ ದಾರಿ ಹೋಗುತ್ತಾ ಇದೆ ತಮ್ಮದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರದ ಹಿನ್ನೆಲೆಯಲ್ಲಿ ನಾನು ಹೇಳಿದೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೆ, ಅವರು ಎತ್ತಿರತಕ್ಕ ವಿಚಾರ ಯಾವುದಿದೆ ಆ ವಿಚಾರವನ್ನು ನಮ್ಮಲ್ಲಿರತಕ್ಕ ಕೆಲವು ಜನರು ನೋಡೋಣ. ನನಗೂ ಕೂಡ ಅದನ್ನು ನೋಡಬೇಕು ಎನ್ನುವ ಆಸೆ ಇದೆ. ಅದಕ್ಕೆ ಬೇಕಾಗತಕ್ಕ ಏರ್ಪಾಡು ಕೂಡ ಮಾಡೋಣ. ಬಾದಾಮಿ ಹೌಸ್‌ನಲ್ಲೇ ಕೆಲವು ಜನ ಶಾಸಕರು ಯಾರೆಲ್ಲಾ ನೋಡಬೇಕೆಂದಿದ್ದಾರೆ ನಾವೆಲ್ಲರೂ ಹೋಗಿ ಆ ಚಿತ್ರವನ್ನು ನೋಡೋಣ. ಏನು ಅಶ್ಲೀಲತೆ

ಇದೆ? ಯಾವ ರೀತಿ ಅದನ್ನು ಚಿತ್ರವನ್ನು ಚಿತ್ರೀಕರಣ ಮಾಡಿದ್ದಾರೆ ಎಂದು ಹೇಳುತ್ತಾ ಇರತಕ್ಕಂಥದ್ದನ್ನು ನೋಡಲಿಕ್ಕೆ ಇರತಕ್ಕ ಕಾರ್ಯಕ್ರಮವನ್ನು ಮಾಡೋಣ. ದಯವಿಟ್ಟು ಹೇಳುತ್ತೇನೆ ಕೇಳಿ. ವಿಚಾರಧಾರೆಯನ್ನು ನಾನು ಹೇಳುತ್ತಾ ಇದ್ದೇನೆ. ನಿಮ್ಮಲ್ಲಿರತಕ್ಕ ಕಳಕಳಿಗಿಂತ ಕಡಿಮೆ ಕಳಕಳಿ ನಮ್ಮಲ್ಲಿಲ್ಲ. ಆದ್ದರಿಂದ ತಾವು ದಯವಿಟ್ಟು ತಿಳಿದುಕೊಳ್ಳಿ. ಇಷ್ಟೆಲ್ಲಾ ಉದ್ವೇಗಕ್ಕೆ ಕಾರಣ ಶ್ರೀಮತಿ ಪ್ರಮೀಳ ಅವರು. ಆದ್ದರಿಂದ.....

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಆದ್ದರಿಂದ ಮಾನ್ಯ ಸಭಾಪತಿಗಳೇ, ನಾವೆಲ್ಲಾ ಅದನ್ನು ಹೋಗಿ ನೋಡೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ : ದಯವಿಟ್ಟು ಇದು ಸರಿಯಲ್ಲ.

ಶ್ರೀ ಎಂ. ಸಿ. ನಾಣಯ್ಯ : ನಾನು ಪ್ರೀತಿಯಿಂದ ಹೇಳಿದೆ; ತಪ್ಪಿಲ್ಲ ಬಿಡಿ.

ಉಪಾಧ್ಯಕ್ಷರು : ಈಗ ಪ್ರತಾಪಚಂದ್ರ ಶೆಟ್ಟಿಯವರು.

(ಹಲವಾರು ಸದಸ್ಯರು ಮಾತನಾಡಲು ಎದ್ದು ನಿಂತರು).

ಉಪಾಧ್ಯಕ್ಷರು : ಇವತ್ತು ಶೂನ್ಯವೇಳೆಯನ್ನೇ ಚರ್ಚೆ ಮಾಡೋಣ. ಬೇರೆ ಯಾವೂದೂ ಚರ್ಚೆ ಮಾಡುವುದು ಬೇಡವೇ? ಪ್ರತಾಪಚಂದ್ರಶೆಟ್ಟಿಯವರನ್ನು ಕರೆದಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಮಾನ್ಯ ಅಧ್ಯಕ್ಷರೆ, ಆಶ್ರಯ ಮನೆಗಳು ಮತ್ತು ಅಂಬೇಡ್ಕರ್ ಮನೆಗಳ ಹಣವನ್ನು....

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ.....

ಉಪಾಧ್ಯಕ್ಷರು : ಈಗ ಅದರ ಬಗ್ಗೆ ರಿಪ್ಲೈ ಆಗಿದೆ. ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಇಲ್ಲಿಗೆ ಮುಗಿಸೋಣ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮರ್ಪಕವಾಗಿ ಹಣ ಪಾವತಿಯಾಗಿಲ್ಲ.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಮೌನವಾಗಿ ಕುಳಿತಿದ್ದಾರೆ. ಅವರ ಅಭಿಪ್ರಾಯ ಹೇಳಲಿ ಎಂದು ನಾವು ಹೇಳುತ್ತಿರುವುದಷ್ಟೆ. ಈ ಚಿತ್ರದ ಬಗ್ಗೆ ನಿಮಗೇನೂ ಸಗ್ನತೆ ಬಗ್ಗೆ ಅಶ್ಲೀಲತೆ ಬಗ್ಗೆ ಆಸಕ್ತಿ ಇಲ್ಲವೋ ಅಥವಾ ನೀವು ಚಿತ್ರ ನೋಡುವುದಿಲ್ಲವೋ? ಸ್ವಲ್ಪ ನಿಮ್ಮ ಅಭಿಪ್ರಾಯ ನಮಗೆ ಕೊಡಬೇಕು. ತಾವು ಹೀಗೆ ಕುಳಿತುಬಿಟ್ಟರೆ ಹೇಗೆ? ಮುಖ್ಯ ಮಂತ್ರಿಗಳ ಕಡೆಯಿಂದ ಸದನದಲ್ಲಿ ನಾಲ್ಕು ಮಾತು ಸದನಕ್ಕೆ ತೂಕ ಬರುತ್ತದೆ. ಆದ್ದರಿಂದ ಅವರು ಹೇಳಬೇಕು.

ಉಪಾಧ್ಯಕ್ಷರು : ಆ ವಿಷಯ ಮುಗಿದಿದೆ ಅಂತ ಹೇಳಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ : ತಮ್ಮ ಸಂಭಾಷಣೆಯಲ್ಲಿ ಅವರಿಗೆ ಪಾಲ್ಗೊಳ್ಳುವುದಕ್ಕೆ ಇಷ್ಟ ಇಲ್ಲ.

ಶ್ರೀಮತಿ ಎಸ್. ಜ್ಯೋತಿರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಈ ಸಬ್ಜೆಕ್ಟನ್ನು ಇಲ್ಲಿಗೆ ನಿಲ್ಲಿಸಿದರೆ ಅರ್ಧ ಹೆಣ್ಣಿನ ಶೋಷಣೆ ಕಡಿಮೆಯಾಗುತ್ತದೆ ಅಂತ ಅನ್ನಿಸುತ್ತದೆ.